
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಬಿಗ್ ಬ್ಯಾಷ್ ಲೀಗ್ 15ನೇ ಆವೃತ್ತಿಯಲ್ಲಿ ಸಿಡ್ನಿ ಥಂಡರ್ ಪರ ಆಡಲು ಒಪ್ಪಂದಕ್ಕೆ ಸಹಿ ಮಾಡಿದ್ದ ಭಾರತ ತಂಡದ ಮಾಜಿ ಆಟಗಾರ ರವಿಚಂದ್ರನ್ ಅಶ್ವಿನ್, ಟೂರ್ನಿ ಆರಂಭಕ್ಕೂ ಮೊದಲೇ ಮೊಣಕಾಲಿನ ಗಾಯದಿಂದಾಗಿ ಸಂಪೂರ್ಣ ಸೀಸನ್‌ನಿಂದಲೆ ಹೊರಗುಳಿಯಲಿದ್ದಾರೆ.


05 ನವೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 235 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಕಸ ಸುರಿಯುವ ಹಬ್ಬ: ಇದು ಅತಿರೇಕದ ಕ್ರಮವೇ ? » 2





ತಾಯಿ-ಶಿಶು ಮರಣ ಸಂಪೂರ್ಣ ನಿಯಂತ್ರಿಸಿ » 3





ನ.9 ರಂದು ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನೆ » 4


# ಶೃಂಗಸಭೆ ನೆಪದಲ್ಲಾದರೂ ರಸ್ತೆ ಗುಂಡಿ ಮುಚ್ಚಿ

- ಬೆಂಗಳೂರು ಬ್ರ್ಯಾಂಡ್‌ಗೆ ಧಕ್ಕೆ ತರಬೇಡಿ
- ರಾಜ್ಯ ಸರ್ಕಾರಕ್ಕೆ ಆರ್.ಅಶೋಕ್ ತಿರುಗೇಟು

• ಪ್ರಜೋದಯ ವರದಿ

**ಬೆಂಗಳೂರು:** ಬೆಂಗಳೂರು ಟೆಕ್ ಶೃಂಗಸಭೆಗೆ ಬರುವ ಜಾಗತಿಕ ಪ್ರತಿನಿಧಿಗಳು ಪ್ರಯಾಣಿಸಬೇಕಾದ ಗುಂಡಿ ಬಿದ್ದ, ಕಸದಿಂದ ತುಂಬಿ ತುಳುಕುವ ರಸ್ತೆಗಳನ್ನು ಸರಿಪಡಿಸಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗೆ ಮನವಿ ಮಾಡಿ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಾಲೆಳೆದಿದ್ದಾರೆ.

ಪ್ರಿಯಾಂಕ್ ಖರ್ಗೆ ಅವರಿಗೆ ಆರ್‌ಎಸ್‌ಎಸ್ ಬಗ್ಗೆ ಟೀಕಿಸುವ ಹೊರತಾಗಿಯೂ ತಮಗೆ ಒಂದು ಖಾತೆಯ ಜವಾಬ್ದಾರಿ ಇದೆ ಎಂದು ಕಡೆಗೂ ನೆನಪಿಸಿಕೊಂಡಿರುವುದು ಸಂತೋಷವೆಂದು ಅವರು ಎಕ್ಸ್‌ನಲ್ಲಿ ಹೇಳಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ ಈ ನಾಲಾಯಕ್ ಸರ್ಕಾರ ಬೆಂಗಳೂರಿನ ಮೂಲಸೌಕರ್ಯ ಹಾಳು ಮಾಡಿದೆ. ಟ್ರಾಫಿಕ್ ಸಮಸ್ಯೆ ಉಲ್ಬಣ ಗೊಳಿಸಿದೆ. ಹೂಡಿಕೆದಾರರನ್ನು ಮತ್ತು ನವೋದ್ಯಮಿಗಳನ್ನು ಹೆದರಿಸಿ, ಬೆದರಿಸಿ, ಅವಮಾನ ಮಾಡಿ ಬೆಂಗಳೂರಿನ ವರ್ಚಸ್ಸಿಗೆ, ಜಾಗತಿಕ ಬ್ರ್ಯಾಂಡ್‌ಗೆ ಧಕ್ಕೆ ತಂದಿದೆ ಎಂದು ಅಶೋಕ್ ದೂರಿದ್ದಾರೆ.



ಕಾಂಗ್ರೆಸ್ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು, ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ಭಾಗಿಯಾಗಲು ವಿಶ್ವದ ತಂತ್ರಜ್ಞಾನ ಲೋಕದ ದಿಗ್ಗಜರು ಬೆಂಗಳೂರಿಗೆ ಬರುವ ಮುನ್ನ ಇಲ್ಲಿನ ರಸ್ತೆಗಳನ್ನು ಸರಿಪಡಿಸಿ ನಮ್ಮ ನಗರವನ್ನು ಮತ್ತೊಂದು ಸುತ್ತಿನ ಅವಮಾನದಿಂದ ಉಳಿಸಲಿ ಎನ್ನುವುದೇ ಜನರ ನಿರೀಕ್ಷೆ ಎಂದು ಹೇಳಿದ್ದಾರೆ.

ಬೆಂಗಳೂರು ಟೆಕ್ ಶೃಂಗಸಭೆಯ ಸಂದರ್ಭದಲ್ಲಿ ನಗರದ ಕೆಟ್ಟ ಸ್ಥಿತಿಯಿಂದ ಬೆಂಗಳೂರು ನಗರಕ್ಕೆ ಮತ್ತೊಂದು ಜಾಗತಿಕ ಮುಜುಗರವಾಗುವುದಿಲ್ಲವೆಂದು ರಾಜ್ಯ ಸರ್ಕಾರ ಗ್ಯಾರಂಟಿ ನೀಡುತ್ತದೆಯೇ ಎಂದೂ ಪ್ರಶ್ನಿಸಿದ್ದಾರೆ.

> **ಸರ್ಕಾರ ಈಗಲಾದರೂ ಎಚ್ಚೆತ್ತು ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಭಾಗಿಯಾಗಲು ಪ್ರಪಂಚದ ತಂತ್ರಜ್ಞಾನ ಲೋಕದ ದಿಗ್ಗಜರು ಬೆಂಗಳೂರಿಗೆ ಬರುವ ಮುನ್ನ ಇಲ್ಲಿನ ರಸ್ತೆಗಳನ್ನು ಸರಿಪಡಿಸಿ ನಮ್ಮ ನಗರವನ್ನು ಮತ್ತೊಂದು ಸುತ್ತಿನ ಅವಮಾನದಿಂದ ಉಳಿಸಲಿ.**
> **-ಆರ್.ಅಶೋಕ್, ವಿರೋಧ ಪಕ್ಷದ ನಾಯಕ**

**ಟ್ರಂಪ್‌ಗಾಗಿ ಮುಚ್ಚಿಟ್ಟ ಪರಿಸ್ಥಿತಿ ಇಲ್ಲ**

ನಮಸ್ತೆ ಟ್ರಂಪ್‌ಗಾಗಿ ಗುಜರಾತಿನ ಅಹಮದಾಬಾದ್‌ನ ಅವ್ಯವಸ್ಥೆಗಳಿಗೆ ಬಡತನಕ್ಕೆ ಕಸದ ಕೊಂಪೆಗಳಿಗೆ ಟಾರ್ಪಲ್ ಹಾಕಿ ಮುಚ್ಚಿಟ್ಟಿದ್ದಂತಹ ಪರಿಸ್ಥಿತಿ ಬೆಂಗಳೂರಿನಲ್ಲಿಲ್ಲವೆಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

ಜಿ -20 ಶೃಂಗಸಭೆಗಾಗಿ ದೆಹಲಿಯ ಬಡವರಿಗೆ ದಿಗ್ಬಂಧನ ವಿಧಿಸಿ ಬಡವರನ್ನು ಬಡತನವನ್ನು ಬಂಧನದಲ್ಲಿ ಇಟ್ಟಿದ್ದಂತಹ ದುಃಸ್ಥಿತಿ ಬೆಂಗಳೂರಿಗೆ ಬಂದಿಲ್ಲ. ಬೆಂಗಳೂರಿನ ಮಹತ್ವದ ಬಗ್ಗೆ ಬಿಜೆಪಿಯವರಿಗೆ ಅರಿವಿಲ್ಲದಿರಬಹುದು. ಆದರೆ, ಮರ್ಸಿಡಿಸ್ ಬೆಂಜ್‌ನ ಸಿಇಒ ಅವರಿಂದ ಹಿಡಿದು ದೇಶದ ಹೂಡಿಕೆದಾರರವರೆಗೂ ಈ ನಗರದ ಬಗ್ಗೆ ಅರಿವಿದೆ. ಜಾಗತಿಕ ಸ್ಟಾರ್ಟ್ ಅಪ್ ಇಕೊಸಿಸ್ಟಂ ಸೂಚ್ಯಂಕದಲ್ಲಿ ಬೆಂಗಳೂರು 14ನೇ ಸ್ಥಾನಕ್ಕೆ ಏರಿರುವುದು ನಮ್ಮ ಕಾರ್ಯವೈಖರಿಗೆ ಹಿಡಿದ ಕನ್ನಡಿ ಎಂದಿದ್ದಾರೆ. ಅಶೋಕ್ ಅವರು ಶಾಖೆಗೆ ಹೋಗಿ ದೊಣ್ಣೆ ಹಿಡಿಯುವುದನ್ನು ಬಿಟ್ಟು ಜಗತ್ತಿನ ಆಗುಹೋಗುಗಳ ಬಗ್ಗೆ ಬೆಂಗಳೂರಿನ ಹೆಗ್ಗಳಿಕೆಯ ಬಗ್ಗೆ ತಿಳಿಯುವ ಪ್ರಯತ್ನ ನಡೆಸಿದ್ದರೆ ಈ ರೀತಿಯ ಅಪ್ರಬುದ್ಧ ಹೇಳಿಕೆ ನೀಡುತ್ತಿರಲಿಲ್ಲವೆಂದೂ ತಿವಿದಿದ್ದಾರೆ.

## ನ.18 ರಿಂದ ಟೆಕ್ ಶೃಂಗಸಭೆ

ಬೆಂಗಳೂರು ಟೆಕ್ ಶೃಂಗಸಭೆ ನ. 18 ರಿಂದ ಮೂರು ದಿನಗಳವರೆಗೆ ನಡೆಯಲಿದ್ದು, ವಿಶ್ವದ ವಿವಿಧೆಡೆಯಿಂದ 60 ದೇಶದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ತುಮಕೂರು ರಸ್ತೆಯ ಬೆಂಗಳೂರು ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಸಭೆ ನಡೆಯಲಿದೆ. ತಂತ್ರಜ್ಞಾನ ಮತ್ತು ಉದ್ಯಮವನ್ನು ಒಂದೇ ವೇದಿಕೆಗೆ ತರುವ ಜಾಗತಿಕ ಕಾರ್ಯಕ್ರಮ ಇದಾಗಿದ್ದು, ಈ ಬಾರಿ ಕ್ವಾಂಟಮ್ ಕಂಪ್ಯೂಟಿಂಗ್, ಎಐ, ಸ್ಪೇಸ್‌ಟೆಕ್, ಹೆಲ್ತ್ ಟೆಕ್‌ಗೆ ವಿಶೇಷ ಗಮನ ನೀಡಲಾಗುವುದು. 20ರಂದು ಫ್ಯೂಚರ್ ಮೇಕರ್ಸ್ ಕಾನ್‌ಕ್ಲೇವ್ ನಡೆಯಲಿದ್ದು, 10 ಸಾವಿರಕ್ಕೂ ಹೆಚ್ಚಿನ ಉದ್ಯಮಿಗಳು, ಹೂಡಿಕೆದಾರರು, ಸ್ಟಾರ್ಟ್ ಅಪ್ ಸಂಸ್ಥಾಪಕರು ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆವಿಷ್ಕಾರ ಮಾಡಿರುವವರು ಪಾಲ್ಗೊಳ್ಳಲಿದ್ದಾರೆ.

## ಮಾಜಿ ಸಚಿವ ಹೆಚ್.ವೈ.ಮೇಟಿ ನಿಧನ

• ಪ್ರಜೋದಯ ವರದಿ



**ಬೆಂಗಳೂರು:** ಮಾಜಿ ಸಚಿವರೂ ಆದ ಬಾಗಲಕೋಟೆ ಶಾಸಕ ಹೆಚ್.ವೈ.ಮೇಟಿ (79) (ಹುಲ್ಲಪ್ಪ ಯಮನಪ್ಪ ಮೇಟಿ) ನಗರದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಉಸಿರಾಟದ ಸಮಸ್ಯೆ ಹಾಗು ಇತರ ವಯೋಸಹಜ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಬಾಗಲಕೋಟೆ ಜಿಲ್ಲೆಯ ತಿಮ್ಮಾಪುರದ ಮೂಲಕ ರಾಜಕೀಯ ಜೀವನ ಆರಂಭಿಸಿದ್ದರು. 1989ರಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಿಂದ ವಿಧಾನಸೌಧ ಪ್ರವೇಶಿಸಿದ್ದರು. 1994ರಲ್ಲಿಯೂ ಆಯ್ಕೆಯಾಗಿದ್ದ ಅವರು, ಅರಣ್ಯ ಇಲಾಖೆ ಸಚಿವರಾಗಿದ್ದರು. 1996ರಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಕ್ಷೇತ್ರ ವಿಂಗಡಣೆ ಸಂದರ್ಭದಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರ ರದ್ದಾಗಿದ್ದರಿಂದ 2008ರಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತರು. 2013ರಲ್ಲಿ ಗೆಲುವು ಸಾಧಿಸಿ ಅಬಕಾರಿ ಸಚಿವರಾಗಿದ್ದರು. 2018ರಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. 2023ರ ಚುನಾವಣೆಯಲ್ಲಿ ಬಾಗಲಕೋಟೆ ಕ್ಷೇತ್ರದಿಂದ ಗೆದ್ದು ಶಾಸಕರಾದರು. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿದ್ದರು.

# ಅಧಿಕಾರಿಗಳ ಹೆದರಿಸುವ ವರ್ತನೆ ಸರಿಯಲ್ಲ

• ಪ್ರಜೋದಯ ವರದಿ

**ಹಾಸನ:** ಅಧಿಕಾರಿಗಳನ್ನು ಹೆದರಿಸಿ ಹಿಡಿತದಲ್ಲಿಟ್ಟುಕೊಳ್ಳಲು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಪ್ರಯತ್ನಿಸುತ್ತಿದ್ದಾರೆ. ಉಸ್ತುವಾರಿ ಸಚಿವರು ಅವರಿಗೆ ಬುದ್ಧಿ ಹೇಳದಿದ್ದರೆ ಜಿಲ್ಲೆಯ ಜನರೇ ಉತ್ತರ ಕೊಡುತ್ತಾರೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಹಾಸನಾಂಬ ದರ್ಶನಕ್ಕೆ ನಾನು ಬಂದಾಗ ಎಡಿಆರ್ ಎಲ್ ಸಂಶುದ್ದೀನ್ ನನ್ನ ಜೊತೆ ಕಾಲ್ನಡಿಗೆಯಲ್ಲಿ ಬಂದರೆಂಬ ಕಾರಣಕ್ಕೆ ಕಡ್ಡಾಯ ರಜೆ ಮೇಲೆ ಕಳುಹಿಸಿದ್ದಾರೆ. ಜನಪ್ರತಿನಿಧಿ ಜೊತೆಗೆ ಅಧಿಕಾರಿಗಳು ಮಾತನಾಡಬಾರದಾ, ಶಾಸಕರಾಗಿ ಅವರೊಟ್ಟಿಗೆ ಮಾತನಾಡುವ ಅಧಿಕಾರ ನನಗಿಲ್ಲವೇ. ಜಿಲ್ಲಾಧಿಕಾರಿಯ ಸರ್ವಾಧಿಕಾರಿ ನಡೆ ಒಳ್ಳೆಯದಲ್ಲವೆಂದರು.

ಮುಸ್ಲಿಂ ಸಮುದಾಯದವರು ಓಟು ಹಾಕಿದ್ದರಿಂದಲೇ ರಾಜ್ಯದಲ್ಲಿ ಕಾಂಗ್ರೆಸ್‌ಗೆ 136 ಸ್ಥಾನ ದೊರೆತಿದೆ. ಆ ಸಮುದಾಯದ ಅಧಿಕಾರಿಗಳಿಗೆ ಭದ್ರತೆ ಇಲ್ಲವಾಗಿದೆ. ಮುಸ್ಲಿ ಮರಿಗೆ ಬಿಜೆಪಿ ಅವಧಿಯಲ್ಲೂ ನಮ್ಮ ದಿ ಇಲ್ಲ. ಕಾಂಗ್ರೆಸ್ ಆಡಳಿತದಲ್ಲೂ ಅದೇ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.



**ಅಧಿಕಾರಿಗಳಿಗೆ ಭಯ**

ಮಹಾನಗರ ಪಾಲಿಕೆ ಆಯುಕ್ತ ಆರ್. ಕೃಷ್ಣಮೂರ್ತಿ ಅವರನ್ನು ಕಡ್ಡಾಯ ರಜೆ ಮೇಲೆ ಕಳಿಸಲು ಕಾರಣ ಏನೆಂಬುದನ್ನು ಸಾರ್ವಜನಿಕವಾಗಿ ಹೇಳಬೇಕು. 15 ದಿನಗಳಿಂದ ಬಯೋಮೆಟ್ರಿಕ್ ಕೊಡಲು ಆಗದೆ ಇತರೆ ಕೆಲಸಗಳಿಗೆ ಸಮಸ್ಯೆಯಾಗುತ್ತಿದೆ. ಮಹಾನಗರ ಪಾಲಿಕೆಯಲ್ಲಿ ಸಮಸ್ಯೆಗಳು ಮಿತಿ ಮೀರಿವೆ. ಈ ಜಿಲ್ಲಾಧಿಕಾರಿಗೆ ಹೆದರಿ ಅಪರ ಜಿಲ್ಲಾಧಿಕಾರಿ ಹುದ್ದೆಗೆ ಯಾರೂ ಬರುತ್ತಿಲ್ಲ. ಎಡಿಸಿಯಾಗಿರುವ ಮಂಜುನಾಥ್ ಒಬ್ಬರೇ 14 ಹುದ್ದೆ ನಿಬಾಯಿಸ ಬೇಕಾಗಿದೆ. ಅವರಿಗೆ ಹೆದರಿ ಉಪವಿಭಾಗಾಧಿಕಾರಿ ಮಾರುತಿ ವರ್ಗ ಮಾಡಿಸಿಕೊಂಡು ಹೋದರು. ಅಬಕಾರಿ ಜಿಲ್ಲಾಧಿಕಾರಿ ಸಹ ನಿರ್ಗಮಿಸಿದರು.

ಜಿಲ್ಲೆಗೆ ಬರಲು ಅಧಿಕಾರಿಗಳು ಭಯ ಪಡುತ್ತಿದ್ದಾರೆ. ಜಿಲ್ಲಾಧಿಕಾರಿಯ ದುರಹಂಕಾರ ವರ್ತನೆ ಮೀರಿದೆ. ಬೈಕ್, ಸೈಕಲ್‌ನಲ್ಲಿ ನಗರ ಸುತ್ತುವ ಬದಲು ಸರ್ಕಾರ ಕೊಟ್ಟಿರುವ ಕಾರಿನಲ್ಲಿ ಸುತ್ತಾಡಿ ಜನರ ಸಮಸ್ಯೆಗೆ ಕಿವಿಯಾಗಿ ಎಂದು ಕಿವಿಮಾತು ಹೇಳಿದರು.

ಅತಿಯಾದ ಮಳೆಯಿಂದ ಬೆಳೆ ಹಾಳಾಗಿದೆ. ಜಮೀನಿನಲ್ಲಿ ನೀರು ನಿಂತು ಅನ್ನದಾತರು ಕಂಗೆಟ್ಟಿದ್ದಾರೆ. ಆದರೆ ಜಿಲ್ಲಾಡಳಿತದಿಂದ ಸರ್ಕಾರಕ್ಕೆ ಇದುವರೆಗೆ ವರದಿ ಸಲ್ಲಿಕೆಯಾಗಿಲ್ಲ. ರಸ್ತೆಗಳೆಲ್ಲಾ ಗುಂಡಿ ಬಿದ್ದು ಬಿದ್ದು ನಿತ್ಯ ಸಾವು-ನೋವು ಸಂಭವಿಸುತ್ತಿವೆ. ಈ ಜಿಲ್ಲಾಧಿಕಾರಿ ಅವರು ಏನು ಮಾಡುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ. ಇನ್ನು ಮುಂದೆಯೂ ದುರ್ವರ್ತನೆ ಮುಂದುವರಿಸಿದರೆ ಒಂದಲ್ಲ ಒಂದು ದಿನ ನೀವು ಸಿಕ್ಕಿಬೀಳುತ್ತೀರಿ. ಜನರೇ ನಿಮ್ಮ ದುರಹಂಕಾರ ಕಡಿಮೆ ಮಾಡಿಸುತ್ತಾರೆಂದು ಎಚ್ಚರಿಸಿದರು.

## ಮೊದಲ ಹಂತದ ಚುನಾವಣಾ ಪ್ರಚಾರಕ್ಕೆ ತೆರೆ

• ಪ್ರಜೋದಯ ವರದಿ

**ಪಟ್ನಾ:** ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 121 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರ ಮಂಗಳವಾರ ಸಂಜೆ ತೆರೆ ಬಿತ್ತು.

ಆಡಳಿತಾರೂಢ ಎನ್‌ಡಿಎ ಮತ್ತು ವಿರೋಧ ಪಕ್ಷಗಳ ಇಂಡಿಯಾ ಕೂಟದ ನಾಯಕರು ಕೊನೆಯ ದಿನ ಮತದಾರರನ್ನು ಸೆಳೆಯಲು ಬಿರುಸಿನ ಪ್ರಚಾರ ನಡೆಸಿದರು. ಮೊದಲ ಹಂತದ ಮತದಾನ ಗುರುವಾರ ನಡೆಯಲಿದೆ. 243 ಸದಸ್ಯ ಬಲದ ವಿಧಾನಸಭೆಯ ಉಳಿದ 122 ಸ್ಥಾನಗಳಿಗೆ ನವೆಂಬರ್ 11ರಂದು ಮತದಾನ ನಡೆಯಲಿದ್ದು, ನವೆಂಬರ್ 14ರಂದು ಫಲಿತಾಂಶ ಹೊರಬೀಳಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಮೂರು ಪ್ರಚಾರ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದರೆ, ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಐದು ಕಡೆ ಸಾರ್ವಜನಿಕ ಸಭೆಗಳನ್ನು ನಡೆಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ರೋಡ್ ಶೋನಲ್ಲಿ ಪಾಲ್ಗೊಂಡರು.

# ಮಹಿಳಾ ಸರ್ಕಾರಿ ನೌಕರರ ಹಕ್ಕುಗಳ ರಕ್ಷಣೆ ಆಗ್ರಹ

## ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿಗೆ ಮನವಿ ಸಲ್ಲಿಕೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಮಹಿಳಾ ಸರ್ಕಾರಿ ನೌಕರರ ಹಕ್ಕುಗಳ ರಕ್ಷಣೆ ಹಾಗು ಕಲ್ಯಾಣಕ್ಕಾಗಿ ಒತ್ತಾಯಿಸಿ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಅಧ್ಯಕ್ಷೆಯನ್ನು ಭೇಟಿಯಾದ ಶಿಕ್ಷಕರ ಸಂಘದ ಪ್ರತಿನಿಧಿಗಳು, ಸರ್ಕಾರಿ ಮಹಿಳಾ ನೌಕರರ ಸೇವಾ ಸಮಸ್ಯೆಗಳು ಮತ್ತು ಸೌಲಭ್ಯಗಳ ಕೊರತೆ ಕುರಿತು ವಿವರಿಸಿದರು. ಮನವಿ ಪತ್ರದಲ್ಲಿದ್ದ ವಿಷಯಗಳನ್ನು ಆಲಿಸಿದ ನಾಗಲಕ್ಷ್ಮೀ ಚೌಧರಿ ಅವರು ಬುಧವಾರ ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ ನಡೆಯಲಿರುವ ಮಹಿಳಾ ಸ್ಪಂದನೆ ಸಭೆಯಲ್ಲಿ ಎಲ್ಲಾ ಅಂಶಗಳ ಕುರಿತು ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.



ಸರ್ಕಾರಿ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ವಿತರಿಸುವ ಸ್ಯಾನಿಟರಿ ಪ್ಯಾಡ್‌ಗಳು ಉತ್ತಮ ಗುಣಮಟ್ಟದಿಂದ ಕೂಡಿದವುಗಳಾಗಿದ್ದು, ಸಕಾಲಕ್ಕೆ ವಿತರಣೆ ಆಗುವಂತೆ ಕ್ರಮ ವಹಿಸಬೇಕು. ಕೆಲವು ಇಲಾಖೆಗಳು ಶಿಶುಪಾಲನೆ ರಜೆ ನೀಡಲು ವಿಳಂಬ ಮಾಡುತ್ತಿರುವುದರಿಂದ, ತ್ವರಿತ ಕ್ರಮ ಕೈಗೊಳ್ಳಬೇಕು. ಮಹಿಳಾ ನೌಕರರು ಚಿಕ್ಕ ಮಗುವಿಗೆ ಹಾಲು ಉಣಿಸಲು ಬೆಳಿಗ್ಗೆ ಹಾಗು ಮಧ್ಯಾಹ್ನ ತಲಾ ಒಂದು ಗಂಟೆ ಸಮಯಾವಕಾಶ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಶಾಲಾ ಶಿಕ್ಷಕರಿಗೆ 25-30 ವರ್ಷ ಸೇವೆಯ ನಂತರ ಬಡ್ತಿ ನೀಡದ ತಾಲ್ಲೂಕುಗಳಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು. ಋತುಚಕ್ರ ರಜೆ ಘೋಷಣೆಗೆ ಅಭಿನಂದನೆ ಸಲ್ಲಿಸಿ ಶೀಘ್ರ ಅನುಷ್ಠಾನಕ್ಕೆ ಒತ್ತಾಯಿಸಿ, ಹದಿಹರೆಯದ ಬಾಲಕಿಯರಿಗೆ ಜಾಗೃತಿ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕನಿಷ್ಠ ಅರ್ಧ ಶಿಕ್ಷಕಿಯರು ಇರುವಂತೆ ನಿಯಮಾವಳಿ ರೂಪಿಸಬೇಕು. 55 ವರ್ಷ ಮೇಲ್ಪಟ್ಟ ಅಥವಾ ಆರೋಗ್ಯ ಸಮಸ್ಯೆಗೊಳಗಾದ ಮಹಿಳಾ ನೌಕರರನ್ನು ಬಿಎಲ್‌ಓ ಕರ್ತವ್ಯಕ್ಕೆ ನಿಯೋಜಿಸದಂತೆ ಕ್ರಮವಹಿಸಬೇಕು. ಮಹಿಳಾ ನೌಕರರಿಗೆ ಉಚಿತ ಕಾನೂನು ಸಲಹೆ ಸೌಲಭ್ಯ ಹಾಗು ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತೆಗೆ ಗ್ರಾಮ ಮತ್ತು ನಗರ ಮಟ್ಟದಲ್ಲಿ ಸ್ವಚ್ಛತಾ ಸಿಬ್ಬಂದಿ ನೇಮಕ ಮಾಡಬೇಕೆಂದು ಆಗ್ರಹಿಸಿದರು.

ಮಹಿಳಾ ಶಿಕ್ಷಕರ ಸಾರಿಗೆ ಸೌಲಭ್ಯಕ್ಕಾಗಿ ಹಾಸನದಿಂದ ದುಡ್ಡ ಮುನಿಯಪ್ಪನ ದೇವಸ್ಥಾನ, ಹಾಸನದಿಂದ ಗೊರೂರು ಮಾರ್ಗಗಳಲ್ಲಿ ಹೊಸ ಬಸ್ ವ್ಯವಸ್ಥೆ ಪ್ರಾರಂಭಿಸಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು.

ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರ ನಾಯಕರಹಳ್ಳಿ, ಉಪಾಧ್ಯಕ್ಷ ಗುಡುಗನಹಳ್ಳಿ ಮಂಜುನಾಥ, ಸರ್ಕಾರಿ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ಬಿ.ಕೆ.ರವೀಂದ್ರ, ಅರಕಲಗೂಡು ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನ, ಪ್ರಧಾನ ಕಾರ್ಯದರ್ಶಿ ದೊರೇಶ್ ಇತರರಿದ್ದರು.

# ಉಪ ರಾಷ್ಟ್ರಪತಿ ಕಾರ್ಯಕ್ರಮದಲ್ಲಿ ಲೋಪಕ್ಕೆ ಅವಕಾಶ ನೀಡದಿರಿ

- ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಪೂರ್ವಭಾವಿ ಸಭೆ
- ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಲು ಸೂಚನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ನ.9 ರಂದು ಶ್ರವಣಬೆಳಗೊಳಕ್ಕೆ ಆಗಮಿಸುತ್ತಿರುವ ಹಿನ್ನಲೆಯಲ್ಲಿ ಯಾವುದೇ ಲೋಪಕ್ಕೆ ಅವಕಾಶ ನೀಡದಂತೆ ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಲು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸೂಚನೆ ನೀಡಿದರು.

ಮಂಗಳವಾರ ಅಧಿಕಾರಿಗಳೊಂದಿಗೆ ಶ್ರವಣಬೆಳಗೊಳದ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಕಾರ್ಯಕ್ರಮದ ಅಗತ್ಯ ಸಿದ್ಧತೆಗೆ ಕ್ರಮವಹಿಸಬೇಕು. ಮಾರ್ಗಸೂಚಿಯಂತೆ ವೇದಿಕೆ ಮೇಲೆ ಎಲ್ಲಾ ಕುರ್ಚಿಗಳು ಒಂದೇ ರೀತಿ ಇರಬೇಕು. ಪ್ರತಿಯೊಬ್ಬರು ತಮ್ಮ ತಮ್ಮ ಜವಾಬ್ದಾರಿಯನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಬೆಂಗಾವಲು ವಾಹನಗಳ ಸಂಖ್ಯೆ, ಯಾವ ಮಾದರಿ ವಾಹನ ಹಾಗು ವಾಹನ ಚಾಲಕರ ಮೊಬೈಲ್ ನಂಬರ್ ಪಡೆದುಕೊಳ್ಳಿ ಎಂದು ತಿಳಿಸಿದರು.

> **ಏ.24 ಕ್ಕೆ ಚಂದ್ರಗಿರಿ ಮಹೋತ್ಸವ ನಡೆಯಲಿದ್ದು, ರಾಷ್ಟ್ರಪತಿಗಳು ಆಗಮಿಸುತ್ತಾರೆ. ಆ ಸಂದರ್ಭದಲ್ಲಿಯೇ 2030 ರಲ್ಲಿ ನಡೆಯುವ ಮಹಾ ಮಸ್ತಕಾಭಿಷೇಕದ ದಿನಾಂಕ ಘೋಷಣೆ ಮಾಡಲಾಗುವುದು.**
> **- ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಸ್ವಾಮೀಜಿ**



ನಿರಂತರವಾಗಿ ವಿದ್ಯುತ್ ಸಂಪರ್ಕ ಇರುವಂತೆ ನೋಡಿಕೊಳ್ಳಬೇಕು. ಕಾರ್ಯಕ್ರಮದ ಸ್ಥಳದಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಬೇಕು. ರಸ್ತೆಗಳ ಅಕ್ಕಪಕ್ಕದಲ್ಲಿ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮದ ದಿನದಂದು ತಾತ್ಕಾಲಿಕವಾಗಿ ಮಾಂಸದ ಅಂಗಡಿಗಳನ್ನು ಮುಚ್ಚಿಸಬೇಕು. ಬೀದಿ ನಾಯಿಗಳ ಹಾವಳಿ ತಡೆಗೂ ಕೂಡ ಕ್ರಮವಹಿಸುವಂತೆ ತಿಳಿಸಿದರಲ್ಲದೆ, ರಸ್ತೆ ಬದಿ ಸೂಚನಾ ಫಲಕಗಳನ್ನು ಹಾಕುವಂತೆ ಸೂಚಿಸಿದರು.

ಸುಸಜ್ಜಿತ ಆ್ಯಂಬುಲೆನ್ಸ್‌ನೊಂದಿಗೆ ನುರಿತ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಬೇಕು. ಸಾರ್ವಜನಿಕರಿಗೂ ಕೂಡ ಒಂದು ಆ್ಯಂಬುಲೆನ್ಸ್ ಪ್ರತ್ಯೇಕವಾಗಿರಬೇಕು. ಆಹಾರ ಸುರಕ್ಷತೆ ನಿಟ್ಟಿನಲ್ಲಿ ಪರಿಶೀಲಿಸಬೇಕು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಹಸಿರು ಕೊಠಡಿಯಲ್ಲಿ ಗಣ್ಯರಿಗೆ ತಾತ್ಕಾಲಿಕ ಶೌಚಾಲಯ ವ್ಯವಸ್ಥೆಗೆ ಕ್ರಮವಹಿಸಬೇಕು. ಅಗ್ನಿಶಾಮಕ ದಳದ ಹೆಲಿಪ್ಯಾಡ್ ಹಾಗು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಪ್ರತ್ಯೇಕ ವಾಹನಗಳನ್ನು ಇರಿಸಲು ಕ್ರಮವಹಿಸುವಂತೆ ಸೂಚಿಸಿದರು.

ಸಣ್ಣ ಸಣ್ಣ ಅಂಶಗಳನ್ನು ಗಮನ


» ನಾಲ್ಕನೇ ಪುಟದಲ್ಲಿ


## ಸಾರ್ವಜನಿಕರ ಸಂಚಾರಕ್ಕೆ ರಸ್ತೆ ವಿಭಜಕ ಮುಕ್ತಗೊಳಿಸಿ



• ಪ್ರಜೋದಯ ವರದಿ

**ಹಾಸನ:** ಯಗಚಿಹೊಳೆ ಸಮೀಪದ ಉಪ್ಪಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ರಸ್ತೆ ವಿಭಜಕದಲ್ಲಿ ಸಾರ್ವಜನಿಕರು ಮುಕ್ತವಾಗಿ ಸಂಚಾರ ಮಾಡಲು ಅನುವು ಮಾಡಿ ಕೊಡುವಂತೆ ಒತ್ತಾಯಿಸಿ ಶಾಸಕ ಹೆಚ್.ಪಿ.ಸ್ವರೂಪ್ ಹಾಗು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮಂಗಳವಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಭಾಗದಲ್ಲಿ ನವಕೀಸ್ ಕಾಲೇಜಿನ ವಿದ್ಯಾರ್ಥಿಗಳು ಹಾಗು 30 ಹಳ್ಳಿಗಳ ಜನರು ಓಡಾಡಲು ಅನುಕೂಲವಾಗುತ್ತಿತ್ತು. ಆದರೆ, ಇದೀಗ ಡಿವೈಡರ್ ಬಂದ್ ಆಗಿರುವ ಕಾರಣ ಸುಮಾರು 3 ಕಿಲೋ ಮೀಟರ್ ಬಳಸಿ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ತೆರವು ಮಾಡಿ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಸಾರ್ವಜನಿಕರು, ಗ್ರಾಮಸ್ಥರು ಇದ್ದರು.

## ವಿದ್ಯಾರ್ಥಿ ಬಟ್ಟೆ ಬಿಚ್ಚಿಸಿ ಮನಬಂದಂತೆ ಹಲ್ಲೆ

### ಗೆಂಡೆಕಟ್ಟೆ ಅರಣ್ಯದಲ್ಲಿ ಘಟನೆ : ಪೊಲೀಸರ ವಿಚಾರಣೆ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಯೊಬ್ಬನ ಮೇಲೆ ಪುಂಡರ ಗುಂಪೊಂದು ಮನಬಂದಂತೆ ಹಲ್ಲೆ ನಡೆಸಿರುವ ನಗರ ಹೊರವಲಯದ ಗೆಂಡೆಕಟ್ಟೆ ಅರಣ್ಯದಲ್ಲಿ ನಡೆದಿದೆ.



ಭರತ್ ಹಲ್ಲೆಗೊಳಗಾದ ವಿದ್ಯಾರ್ಥಿ. ಪುನೀತ್, ಸುಮಂತ್ ಹಾಗು ಇತರರು ಹಲ್ಲೆ ನಡೆಸಿರುವ ಕಿಡಿಗೇಡಿಗಳು. ಘಟನೆ ಸಂಬಂಧ ಇದುವರೆಗೂ ಯಾವುದೇ ದೂರು ದಾಖಲಾಗಿಲ್ಲ. ಆದರೆ, ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಬಡಾವಣೆ ಠಾಣೆ ಪೊಲೀಸರು ವಿದ್ಯಾರ್ಥಿಗಳನ್ನು ಕರೆ ತಂದು ವಿಚಾರಣೆ ನಡೆಸಲು ಮುಂದಾಗಿದ್ದಾರೆ. ಭರತ್, ಪುನೀತ್ ಹಾಗು ಸುಮಂತ್ ಮೂವರು ಆಲೂರು ಮೂಲದವರಾಗಿದ್ದು, ಭರತ್ ನಗರದ ಖಾಸಗಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಪುನೀತ್ ಹಾಗು ಸುಮಂತ್ ಆಲೂರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಪುನೀತ್, ಸುಮಂತ್ ಸ್ನೇಹಿತೆಯೊಂದಿಗೆ ಗೆಂಡೆಕಟ್ಟೆ ಅರಣ್ಯದಲ್ಲಿ ಕುಳಿತು ಮಾತನಾಡುತ್ತಿದ್ದಾಗ ಭರತ್ ತನ್ನ ಮೊಬೈಲ್‌ನಲ್ಲಿ ಇಬ್ಬರ ವಿಡಿಯೋ ರೆಕಾರ್ಡ್ ಮಾಡಿದ್ದ. ಇದನ್ನು ಸುಮಂತ್ ನೋಡಿದ್ದು, ಕೂಡಲೇ ಆ ವಿಡಿಯೋ ಡಿಲೀಟ್ ಮಾಡುವಂತೆ ಭರತ್‌ಗೆ ಹೇಳಿದ್ದ. ಆದರೆ, ಭರತ್ ವಿಡಿಯೋ ಡಿಲೀಟ್ ಮಾಡುವುದಿಲ್ಲವೆಂದು ಹೇಳಿ ಹೊರಟು ಹೋಗಿದ್ದ.

ಕೋಪಗೊಂಡ ಸುಮಂತ್ ತನ್ನ ಸ್ನೇಹಿತ ಭರತ್‌ಗೆ ಆ ವಿಷಯ ತಿಳಿಸಿದ ನಂತರ ಪುನೀತ್, ಸುಮಂತ್ ಆ್ಯಂಡ್ ಗ್ಯಾಂಗ್ ಭರತ್ ಓದುತ್ತಿದ್ದ ಕಾಲೇಜಿನ ಬಳಿ ಹೋಗಿ ಹಿಗ್ಗಾಮುಗ್ಗಾ ಥಳಿಸಿದ್ದರು. ಆದರೂ ಭರತ್ ವಿಡಿಯೋ ಡಿಲೀಟ್ ಮಾಡಿರಲಿಲ್ಲ. ಮಾರನೇ ದಿನ ಕಾಲೇಜಿನ ಬಳಿ ಬಂದ ಭರತ್‌ನನ್ನು ಹೆದರಿಸಿ ಬೈಕ್‌ನಲ್ಲಿ ಕೂರಿಸಿಕೊಂಡು ಹೋಗಿ ಗೆಂಡೆಕಟ್ಟೆ ಅರಣ್ಯದಲ್ಲಿ ಬಟ್ಟೆ ಬಿಚ್ಚಿ ಮನಬಂದಂತೆ ಥಳಿಸಿದಾರೆ. ನನ್ನನ್ನು ಹೊಡೆಯಬೇಡಿ ಎಂದು ಕೈಮುಗಿದು ಪರಿಪರಿಯಾಗಿ ಬೇಡಿಕೊಂಡರೂ ಅವಾಚ್ಯ ಶಬ್ದಗಳಿಂದ ನಿಂದಿಸಿ ಮನಸ್ಸೋ ಇಚ್ಚೆ ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸುವ ವಿಡಿಯೋವನ್ನು ಸುಮಂತ್ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದು ವೈರಲ್ ಮಾಡಿದ್ದಾನೆ.

ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ಕುರಿತು ತರಬೇತಿ ಕಾರ್ಯಾಗಾರ | ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌದರಿ ಸಲಹೆ

# ಕಾನೂನು ತಿಳಿದುಕೊಂಡು ಶಕ್ತಿಯುತವಾಗಿ ಹೋರಾಡಿ

• ಪ್ರಜೋದಯ ವರದಿ

**ಹಾಸನ:** ಹೆಣ್ಣು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಬಹಳಷ್ಟು ಕಾನೂನುಗಳಿವೆ. ಅವುಗಳನ್ನು ತಿಳಿದುಕೊಂಡು ಶಕ್ತಿಯುತವಾಗಿ ಸಮಾಜದಲ್ಲಿ ಹೋರಾಟ ಮಾಡಬೇಕೆಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌದರಿ ಅವರು ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯ ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯ ಉದ್ದೇಶ ಹೆಣ್ಣು ಮಕ್ಕಳು ಕೆಲಸ ಮಾಡುವ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಗಟ್ಟುವುದಾಗಿದೆ. ಹೆಣ್ಣು ಮಕ್ಕಳು ತಮಗೆ ಇರುವಂತಹ ಹಕ್ಕುಗಳ ಬಗೆಗೆ ತಿಳಿದು ಕೊಳ್ಳುವುದಕ್ಕಾಗಿಯೇ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯ ಕುರಿತು 2013 ರಲ್ಲಿಯೇ ಸುಪ್ರೀಂ ಕೋರ್ಟ್ ಗೆಜೆಟೆಡ್ ನೋಟಿಫಿಕೇಶನ್ ಮಾಡಿದೆ. ಈ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕೆಂದು ಸಲಹೆ ನೀಡಿದರು.



ಅರಿವು ಜ್ಞಾನದ ಸಂಕೇತವಾಗಿದೆ. ಪ್ರತಿ ಹೆಣ್ಣು ಮಕ್ಕಳು ಜಾಗೃತಿ, ಅರಿವು ಮೂಡಿಸಬೇಕು. ಇದರಿಂದ ಶೇ.70 ರಷ್ಟು ಅಪರಾಧಗಳು ಕಡಿಮೆಯಾಗುತ್ತವೆ. ಸರ್ಕಾರ ಪ್ರತಿ ಇಲಾಖೆಗಳಿಗೆ ಜಾಗೃತಿಯನ್ನು ಮೂಡಿಸುವುದಕ್ಕಾಗಿಯೇ ಕೋಟ್ಯಾಂತರ ರೂ. ನೀಡುತ್ತದೆ. ಪ್ರತಿ ಜಿಲ್ಲೆ, ತಾಲ್ಲೂಕು, ಹಳ್ಳಿಯಲ್ಲೂ ಜಾಗೃತರಾಗಿ, ಪ್ರಶ್ನಿಸುವುದನ್ನು ಕಲಿತುಕೊಳ್ಳಬೇಕು ಎಂದರು.

ಕೇವಲ ಪುಸ್ತಕಕ್ಕೆ ಮಾತ್ರ ಸೀಮಿತವಾಗದೆ ವಾಸ್ತವವನ್ನು ತಿಳಿದುಕೊಳ್ಳುವಂತಹ ಜ್ಞಾನವಂತರಾಗಬೇಕು. ಪೊಲೀಸ್ ಇಲಾಖೆಯಲ್ಲಿ ಸ್ಪಂದನೆ ಸಿಗದಿದ್ದಾಗ ಅಲ್ಲಿ ಒಂದು ಕ್ಯೂಆರ್ ಕೋಡ್ ಅನ್ನು ಇಟ್ಟಿದ್ದು, ಸ್ಕ್ಯಾನ್ ಮಾಡಿದಾಗ ನಿಮಗೆ ಕೆಲವೊಂದು ಪ್ರಶ್ನೆಗಳನ್ನು ಕೇಳಲಾಗುತ್ತದೆ. ನೀವು ನಿಮ್ಮ ಸಮಸ್ಯೆಗಳನ್ನು ವಿವರಿಸಬಹುದು. ಇದರ ಕುರಿತು ಅರಿವಿದ್ದಾಗ ಮಾತ್ರ ಈ ರೀತಿಯಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದೆಂಬುದು ತಿಳಿಯುತ್ತದೆ ಎಂದರು.

ಮಹಿಳೆ ಮಾನಸಿಕವಾಗಿ ಆರೋಗ್ಯವಾಗಿದ್ದಾಗ ಮಾತ್ರ ಹೊರ ಬಂದು ಕೆಲಸ ಮಾಡಲು ಸಾಧ್ಯ. ಹೆಣ್ಣು ಮಕ್ಕಳು ಕೆಲಸದ ಸ್ಥಳಗಳಲ್ಲಿ ಸುರಕ್ಷಿತವಾಗಿರಬೇಕು, ಲೈಂಗಿಕ ದೌರ್ಜನ್ಯ ಆಗಬಾರದೆನ್ನುವ ಉದ್ದೇಶದಿಂದ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ರೂಪಿಸಲಾಗಿದೆ. ಹಾಸನ ಕರ್ನಾಟಕದಲ್ಲೇ ಪ್ರಸಿದ್ಧವಾದ ಜಿಲ್ಲೆ, ದೇಶಕ್ಕೆ ಪ್ರಧಾನಿ ಕೊಟ್ಟ ಜಿಲ್ಲೆಯದಾಗಿದೆ ಎಂದು ಹೇಳಿದರು.

> **ಕೆಲಸದ ಸ್ಥಳದಲ್ಲಿ ಅಧಿಕಾರಿಗಳು ನಿಮ್ಮನ್ನು ನೋಡುವಂತಹ ದೃಷ್ಟಿ ಸರಿ ಇಲ್ಲದಿದ್ದರೂ ಸಹ ನೀವುಗಳು ದೂರನ್ನು ಸಲ್ಲಿಸಬಹುದು. ಹತ್ತು ಅಥವಾ ಹತ್ತಕ್ಕಿಂತ ಹೆಚ್ಚು ಮಹಿಳೆಯರು ಸರ್ಕಾರಿ ಅಥವಾ ಖಾಸಗಿ ಯಾವುದೇ ಸ್ಥಳದಲ್ಲಿಯಾಗಲಿ ಕೆಲಸ ನಿರ್ವಹಿಸುತ್ತಿದ್ದರೆ ಅಲ್ಲಿ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯ ಸಮಿತಿ ಇರಬೇಕು.**
> **- ಡಾ.ನಾಗಲಕ್ಷ್ಮೀ ಚೌದರಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ**

ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಆರ್.ರೂಪ ಅವರು ಮಾತನಾಡಿ,


» ನಾಲ್ಕನೇ ಪುಟದಲ್ಲಿ


## ಅಮಾಯಕನಿಗೆ ಕಳ್ಳನ ಪಟ್ಟ

• ಪ್ರಜೋದಯ ವರದಿ

**ಹೊಳೆನರಸೀಪುರ:** ಅಂಗನವಾಡಿಯಿಂದ ಮತ್ತೊಂದು ಅಂಗನವಾಡಿಗೆ ಮಕ್ಕಳಿಗೆ ನೀಡುವ ಆಹಾರ ಪದಾರ್ಥವನ್ನು ಬೈಕ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದ ವ್ಯಕ್ತಿ ಅಕ್ರಮವಾಗಿ ಪದಾರ್ಥ ಸಾಗಿಸುತ್ತಿದ್ದಾನೆಂದು ಆರೋಪಿಸಿ ಆತನನ್ನು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿದ ಘಟನೆ ಪಟ್ಟಣದಲ್ಲಿ ಮಂಗಳವಾರ ನಡೆದಿದೆ.

ಪಟ್ಟಣದ ವಾರ್ಡ್ ನಂ.23ರ ಸಿದ್ದಾರ್ಥ ನಗರ ವಾರ್ಡ್‌ನ ಅಂಗನವಾಡಿ ಕೇಂದ್ರದಿಂದ ಅಂದಾಜು 1 ಕಿ.ಮೀ. ದೂರದಲ್ಲಿರುವ ಪೂಜಾರ ಕೊಪ್ಪಲು ಅಂಗನವಾಡಿಗೆ ವ್ಯಕ್ತಿಯೊಬ್ಬ 7 ಕೆ.ಜಿ. ತೂಕದ ಪುಡಿ ರೂಪದಲ್ಲಿರುವ ಆಹಾರ ಪದಾರ್ಥ ತೆಗೆದುಕೊಂಡು ಹೋಗುತ್ತಿದ್ದ. ಪೂಜಾರ ಕೊಪ್ಪಲು ಅಂಗನವಾಡಿಯಲ್ಲಿ ಸಹಾಯಕರು ಇಲ್ಲದೇ ಇರುವುದರಿಂದ ಅಲ್ಲಿನ ಶಿಕ್ಷಕಿ ಸ್ಥಳೀಯ ವ್ಯಕ್ತಿಗೆ ಆ ಜವಾಬ್ದಾರಿ ವಹಿಸಿದ್ದರು. ಅವರ ನಿರ್ದೇಶನದಂತೆ ಆತ ಬಂದಿದ್ದ. ನೆರವಾಗಲೆಂದು ತನ್ನ


» ನಾಲ್ಕನೇ ಪುಟದಲ್ಲಿ


E-mail : prajodayahsn@gmail.com

ಪ್ರಜೋದಯ

# ಕಸ ಸುರಿಯುವ ಹಬ್ಬ: ಇದು ಅತಿರೇಕದ ಕ್ರಮವೇ?

ಯಕ್ಷಪ್ರಶ್ನೆ ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆದುಹೋಗುವ ವಿಷಯದಲ್ಲಿ ಸಾಮಾನ್ಯವಾಗಿ ಸಮಾಜದ ಕೆಳಸ್ಥರದ ಮತ್ತು ಆರ್ಥಿಕವಾಗಿ ದುರ್ಬಲರಾದ ಜನರನ್ನು ದೂಷಿಸಲಾಗುತ್ತದೆ ಹಾಗೂ ಸುಶಿಕ್ಷಿತರು, ಆರ್ಥಿಕವಾಗಿ ಸಬಲರು ಎನಿಸಿಕೊಂಡವರಿಗೆ ಕ್ಲೀನ್ ಚಿಟ್ ನೀಡಲಾಗುತ್ತದೆ. ವಿಚಿತ್ರವೆಂದರೆ, ವಿದ್ಯಾವಂತರು/ಪ್ರಜ್ಞಾವಂತರು ಎನಿಸಿಕೊಂಡ ಸಾಕಷ್ಟು ಮಂದಿಯೂ ಈ ಬಾಬ್ತಿನಲ್ಲಿ ಪಾಲುದಾರರೇ.

ಬೆಂಗಳೂರಿನಲ್ಲಿ ರಸ್ತೆಬದಿ, ಚರಂಡಿ, ರಾಜಕಾಲುವೆ, ಖಾಲಿ ನಿವೇಶನ ಹೀಗೆ ಎಲ್ಲೆಂದರಲ್ಲಿ ಕಸ/ತ್ಯಾಜ್ಯವನ್ನು ಬಿಸಾಡುವವರ ಮನೆಗಳನ್ನು ಪತ್ತೆಮಾಡಿ, ಅವರ ಮನೆಬಾಗಿಲಿನಲ್ಲಿಯೇ ಕಸ ಸುರಿದು ದಂಡ ವಿಧಿಸುವ ಕಾರ್ಯಾಚರಣೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ಆರಂಭಿಸಿದೆ, ಇದಕ್ಕೆ ಕಸ ಸುರಿಯುವ ಹಬ್ಬ ಎಂದೂ ಹೆಸರಿಟ್ಟಿದೆ!



ಮನೆ ಬಾಗಿಲಿಗೆ ಬರುವ ಕಸದ ಆಟೋ-ಟಿಪ್ಪರ್‌ಗಳಿಗೆ ಕಸ ನೀಡದೆ, ತಮ್ಮ ಬೈಕುಗಳನ್ನೇರಿ ಕಸ ತುಂಬಿದ ಚೀಲಗಳನ್ನು ತಂದು ಬೇಕಾಬಿಟ್ಟಿ ಬಿಸಾಡುವ ಮತ್ತು ಎಲ್ಲೆಂದರಲ್ಲಿ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಳ್ಳುವ ಈ ಕಾರ್ಯಾಚರಣೆಯನ್ನು ಜಿಬಿಎ ಗಂಭೀರವಾಗಿ ಪರಿಗಣಿಸಿದೆ.

ಬೇಕಾಬಿಟ್ಟಿಯಾಗಿ ಕಸ ಎಸೆಯುವವರನ್ನು ನಿಖರವಾಗಿ ಗುರುತಿಸಲು ನಗರಪಾಲಿಕೆಯ ಮಾರ್ಷಲ್‌ಗಳ ಸೇವೆಯನ್ನು ಮತ್ತು ಸಿಸಿಟಿವಿಗಳನ್ನು ಜಿಬಿಎ ಬಳಸುತ್ತಿದೆ. ಮನೆಮನೆಯಿಂದ ಕಸ/ತ್ಯಾಜ್ಯದ ಸಂಗ್ರಹಣೆಗೆ ಹೆಚ್ಚುವರಿ ಟಿಪ್ಪರ್‌ಗಳನ್ನು ಸಜ್ಜುಗೊಳಿಸಲು, ರಾತ್ರಿ ವೇಳೆ ಕೂಡ ಅವುಗಳ ಸೇವೆಯನ್ನು ಒದಗಿಸಲು, ನಿಗದಿತ ಸ್ಥಳಗಳಲ್ಲಿ ಕಸದ ಕಿಯೋಸ್ಕ್‌ಗಳನ್ನು ಸ್ಥಾಪಿಸಲು ಜಿಬಿಎ ಮುಂದಾಗಿದೆ.

ಆಶ್ಚರ್ಯವೆಂದರೆ, ಈ ಕಾರ್ಯಾಚರಣೆಯನ್ನು ಆರಂಭಿಸಿದ ದಿನವೇ 300 ಮನೆಗಳಿಗೆ ಕಸವನ್ನು ಹಿಂದಿರುಗಿಸಲಾಗಿದೆ ಅಥವಾ ಸರಿಯಲಾಗಿದೆ ಮತ್ತು 3 ಲಕ್ಷ ರು. ದಂಡವನ್ನು ವಸೂಲು ಮಾಡಲಾಗಿದೆ. ಇದಕ್ಕೆ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರವನ್ನೂ ನೀಡಲಾಗಿದೆ. ಈ ಕ್ರಮವನ್ನು ಬಹುತೇಕರು ಮುಕ್ತಕಂಠದಿಂದ ಹೊಗಳುತ್ತಿರುವುದರ ಜತೆಗೆ, ಇದು ಅನ್ಯಥಾ ಶರಣಂ ನಾಸ್ತಿ ಪರಿಸ್ಥಿತಿಯ ಕೊಡುಗೆ ಎನ್ನುತ್ತಿದ್ದಾರೆ.

ಜಿಬಿಎ ದಿಢೀರ್ ಎಂಬಂತೆ ಈ ಕ್ರಮವನ್ನು ಕೈಗೊಂಡಿಲ್ಲ; ಈ ಸಮಸ್ಯೆಗೆ ಅಂತ್ಯಹಾಡಲು ಈ ಹಿಂದೆ ಸಾಕಷ್ಟು ಚಿಂತನ-ಮಂಥನವನ್ನು ಅದು ನಡೆಸಿದ್ದುಂಟು, ಹಲವು ರೀತಿಯ ಪ್ರಯೋಗಗಳನ್ನು ಮಾಡಿದ್ದುಂಟು. ಇವು ನಿರೀಕ್ಷಿತ ಫಲ ನೀಡಲು ವಿಫಲವಾಗಿದ್ದರಿಂದ, ಇಂಥ ಕಠಿಣ ಹೆಜ್ಜೆಯನ್ನಿಡಲು ಜಿಬಿಎ ಒಲ್ಲದ ಮನಸ್ಸಿನಿಂದ ಮುಂದಾಗಿದೆ.

ಒಂದು ಕಾಲಕ್ಕೆ, ಬೀದಿಯ ಕೊನೆಯಲ್ಲಿ ತೊಟ್ಟಿ ಇರಿಸಿ, ಜನರು ಕಸವನ್ನು ಅದರಲ್ಲಿ ಹಾಕುವುದಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಇದು ಕೆಲ ಕಾಲ ಚೆನ್ನಾಗಿಯೇ ನಡೆಯಿತು. ಕಾಲಕ್ರಮೇಣ ಮನೆಗಳ ಸಂಖ್ಯೆ ಹೆಚ್ಚಲು, ವಾಸನೆ ಬೀರುವ ಈ ತೊಟ್ಟಿಗಳು ನಮ್ಮ ಮನೆಯ ಹತ್ತಿರ ಬೇಡ, ಬೇರೆಲ್ಲಾದರೂ ಇರಲಿ ಎನ್ನುವವರ ಸಂಖ್ಯೆಯೂ ಹೆಚ್ಚಾಯಿತು. ಹಾಗೆಯೇ ತೊಟ್ಟಿಯನ್ನು ಇರಿಸಲು ಸ್ಥಳದ ಸಮಸ್ಯೆಯೂ ಎದುರಾಯಿತು. ಜನರ ಆಕ್ಷೇಪದಲ್ಲೂ ಅರ್ಥವಿತ್ತು; ಕೆಲವರು ಈ ತೊಟ್ಟಿಯಲ್ಲಿ ಕಸವನ್ನು ಸರಿಯಾಗಿ ಹಾಕದ ಕಾರಣ, ಹೊರಗೇ ಹೆಚ್ಚು ಕಸ ಬಿದ್ದು ಚೆಲ್ಲಾಪಿಲ್ಲಿಯಾಗುತ್ತಿತ್ತು.

ಸಾಲದೆಂಬಂತೆ ಬೀದಿನಾಯಿಗಳು ಈ ಕಸವನ್ನು ಬೇಕಾಬಿಟ್ಟಿ ಎಳೆದುಹಾಕುವುದೂ ಇತ್ತು. ಕಸದ ತೊಟ್ಟಿ ತುಂಬಿ ತುಳುಕಿದರೂ, ಅದನ್ನು ದಿನಂಪ್ರತಿ ಹೊರ ಸಾಗಿಸಲು ಸಾಕಷ್ಟು ಅಡಚಣೆಗಳಿದ್ದವು. ಈ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಮತ್ತು ದೂರುಗಳನ್ನು ವಿಶ್ಲೇಷಿಸಿದ ನಗರಪಾಲಿಕೆಯು, ಈ ತೊಟ್ಟಿ ವ್ಯವಸ್ಥೆಗೆ ಗುಡ್ ಬೈ ಹೇಳಿ ಮನೆಮನೆಯಿಂದ ಕಸ ಸಂಗ್ರಹಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿತು.

ಈ ವ್ಯವಸ್ಥೆಯನ್ನು ಸುಗಮವಾಗಿಸಲು, ಒಣಕಸ ಮತ್ತು ಹಸಿಕಸವನ್ನು ವಿಂಗಡಿಸಿ ಬೇರ್ಪಡಿಸಲು ಪ್ರತಿಯೊಂದು ಮನೆಗೂ ಎರಡೆರಡು ಕಸದ ಬುಟ್ಟಿಗಳನ್ನು ಅದು ವಿತರಿಸಿತು. ಟಿಪ್ಪರ್‌ನವರು ಪ್ರತಿದಿನ ನಿಗದಿತ ಸಮಯದಲ್ಲಿ ಹಸಿಕಸ ಮತ್ತು ಒಣಕಸವನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ಬರುವಂತೆ ವ್ಯವಸ್ಥೆಗೊಳಿಸಲಾಗಿತ್ತು, ಜನರೂ ಈ ವ್ಯವಸ್ಥೆಯನ್ನು ಶ್ಲಾಘಿಸಿದ್ದರು. ಆದರೆ, ಯಾವುದೇ ವ್ಯವಸ್ಥೆಯು ದೋಷರಹಿತವಾಗಿರುವುದು ಕೊಂಚ ವಿರಳವೇ, ಅಂತೆಯೇ ಈ ವ್ಯವಸ್ಥೆ ಕೂಡ. ಹಲವರು ಈ ವ್ಯವಸ್ಥೆಯನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದರೆ, ಮತ್ತೆ ಕೆಲವರು ಈ ಗಾಡಿಗಳು ಮನೆಬಾಗಿಲಿಗೆ ಬಂದು ಹಾರ್ನ್ ಮಾಡಿದರೂ ಕಸ ನೀಡದಷ್ಟು ಉದಾಸೀನ ತೋರಲು ಶುರುಮಾಡಿದರು.



ಕೆಲವರು (ಬಹುತೇಕ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರು), ನಾವಿನ್ನೂ ಹಾಸಿಗೆಯಿಂದ ಮೇಲೇಳುವ ಮೊದಲೇ ಇವರು ಬಂದಿರುತ್ತಾರೆ ಎಂದು ಗೊಣಗಿದರೆ, ಇನ್ನು ಕೆಲವರು ಕಸದವರು ಬಂದಾಗ ನಾವು ತಿಂಡಿ ತಯಾರಿಯಲ್ಲಿ ವ್ಯಸ್ತರಾಗಿರುತ್ತೇವೆ ಎಂದೋ, ಅಷ್ಟು ಹೊತ್ತಿಗೇ ಮನೆಯ ಕಸ ರೆಡಿಯಾಗಿರುವುದಿಲ್ಲ ಎಂದೋ ನೆಪಗಳನ್ನು ಹೇಳತೊಡಗಿದರು.

ಟಿಪ್ಪರ್‌ನವರು ಬರುವ ಸಮಯ ಬದಲಾಗಲಿ ಎಂದು ಸಲಹೆ ನೀಡಿದವರೂ ಉಂಟು. ಹಸಿ ಮತ್ತು ಒಣಕಸವನ್ನು ವಿಂಗಡಣೆ ಮಾಡದವರು ಸಾಕಷ್ಟು ಮಂದಿ. ಒಟ್ಟಿನಲ್ಲಿ ಈ ಸಮಸ್ಯೆ ತಾರಕಕ್ಕೇರಲು ಸಾಕಷ್ಟು ಕಾರಣಗಳಿದ್ದವು. ಹೀಗೆ ಟಿಪ್ಪರ್‌ಗಳಿಗೆ ಕಸ ಹಾಕಲು ವಿಫಲರಾದವರೆಲ್ಲಾ ಅದನ್ನು ರಸ್ತೆಬದಿಯಲ್ಲೋ, ಹತ್ತಿರದ ಖಾಲಿ ನಿವೇಶನದಲ್ಲೋ, ಬೀಗ ಹಾಕಿರುವ ಮನೆಯ ಎದುರಿಗೋ, ಕೂಡುರಸ್ತೆಯಲ್ಲೋ ಎಸೆದು ಕೈತೊಳೆದುಕೊಳ್ಳುತ್ತಿದ್ದರು. ಈ ಘನಂದಾರಿ ಕೆಲಸ ಬಹುತೇಕ ನೆರವೇರುತ್ತಿದ್ದುದು ಜಗವೆಲ್ಲ ಮಲಗಿರುವ ಮಧ್ಯರಾತ್ರಿಯಲ್ಲಿ.

ಇಷ್ಟಾಗಿಯೂ ಯಾರಾದರೂ ಪ್ರಶ್ನಿಸಿದರೆ, ಅದನ್ನು ಕೇಳಲು ನೀವ್ಯಾರು? ಪಾಲಿಕೆಯವರು ಇದನ್ನು ನೋಡಿಕೊಳ್ಳುತ್ತಾರೆ, ಅವರಿಗೆ ನಾವು ಉತ್ತರಿಸುತ್ತೇವೆ ಎಂಬ ಉದ್ಧಟ ಪ್ರತಿಕ್ರಿಯೆ! ಜನರು ಹೀಗೆ ಬೇಕಾಬಿಟ್ಟಿಯಾಗಿ ಕಸವನ್ನು ಎಸೆಯುವ ಸ್ಥಳಗಳಲ್ಲಿ ಇಲ್ಲಿ ಕಸವನ್ನು ಎಸೆದರೆ ದಂಡ ವಿಧಿಸಲಾಗುವುದು, ಈ ಸ್ಥಳವು ಸಿಸಿಟಿವಿಯ ಕಣ್ಗಾವಲಿನಲ್ಲಿದೆ ಎಂದು ದಪ್ಪಕ್ಷರಗಳಲ್ಲಿ ಬರೆದಿದ್ದರೂ ಅದನ್ನು ಲೆಕ್ಕಿಸುತ್ತಿದ್ದವರು ಕಮ್ಮಿಯೇ.



ಈ ಎಲ್ಲ ಸಮಸ್ಯೆಗಳ ಹಿನ್ನೆಲೆಯಲ್ಲಿ, ಜಿಬಿಎ ವತಿಯಿಂದ ಕಸ ಸುರಿಯುವ ಹಬ್ಬ ಶುರುವಾಯಿತು ಎನ್ನಿ. ಜಿಬಿಎ ಕೈಗೊಂಡ ಈ ಕ್ರಮ ಮೇಲ್ನೋಟಕ್ಕೆ ಸ್ವಲ್ಪ ಅತಿರೇಕದ್ದು ಎನಿಸಬಹುದು; ಪ್ರಜ್ಞಾವಂತರು ಎಂಬ ಹಣೆಪಟ್ಟಿ ನೇತು ಹಾಕಿಕೊಂಡವರು ಇದನ್ನು ವಿರೋಧಿಸಬಹುದು, ಪರ್ಯಾಯ ಮಾರ್ಗವನ್ನು ಹುಡುಕಬಹುದಿತ್ತು ಎಂದು ವಾದಿಸಬಹುದು.

ಆದರೆ, ಇದು ಅನ್ಯಮಾರ್ಗವಿಲ್ಲದೆ ಕೈಗೊಂಡ ಕ್ರಮ ಎನ್ನುತ್ತದೆ ಜಿಬಿಎ. ಅದು ಹೇಳುವುದರಲ್ಲೂ ಅರ್ಥವಿದೆ. ಏಕೆಂದರೆ ಇಂಥ ಕ್ರಮವನ್ನು ಕೈಗೊಳ್ಳುವುದಕ್ಕೂ ಮುನ್ನ ಜಿಬಿಎ ಸಾಕಷ್ಟು ಆಲೋಚಿಸಿದೆ, ಜನರನ್ನೂ ಎಚ್ಚರಿಸಿದೆ. ಕೊನೆಗೆ ಏನೂ ಫಲ ಸಿಕ್ಕದ ಕಾರಣ, ಅನಿವಾರ್ಯವಾಗಿ ಈ ಹಾದಿಯನ್ನು ಜಿಬಿಎ ತುಳಿದಿದೆ. ಬೆಂಗಳೂರು ರಸ್ತೆಗಳಲ್ಲಿ ಮುಖಕ್ಕೆ ರಾಚುವಂತಿರುವ ಹೊಂಡಗಳು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿರುವುದಕ್ಕೆ ಮಹಾನಗರ ಪಾಲಿಕೆ ಅಥವಾ ಜಿಬಿಎ ದೋಷಿ ಇರಬಹುದು; ಆದರೆ ನಗರದಾದ್ಯಂತ ಕಸ/ ತ್ಯಾಜ್ಯವು ಚೆಲ್ಲಾಪಿಲ್ಲಿಯಾಗಿ ಬೀಳುವಂತಾಗಿರುವುದರಲ್ಲಿ ಜನರ ಪಾತ್ರವೇ ಹೆಚ್ಚು.

ಇದು ಜನರಲ್ಲಿ ನಾಗರಿಕ ಪ್ರಜ್ಞೆಯು ಕುಸಿತವಾಗಿರುವುದರ ಸಂಕೇತ ಎನ್ನಬಹುದು. ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆದುಹೋಗುವ ವಿಷಯದಲ್ಲಿ ಸಾಮಾನ್ಯವಾಗಿ ಸಮಾಜದ ಕೆಳಸ್ಥರದ ಮತ್ತು ಆರ್ಥಿಕವಾಗಿ ದುರ್ಬಲರಾದ ಜನರನ್ನು ದೂಷಿಸಲಾಗುತ್ತದೆ ಹಾಗೂ ಸುಶಿಕ್ಷಿತರು, ಆರ್ಥಿಕವಾಗಿ ಸಬಲರು ಎನಿಸಿಕೊಂಡವರಿಗೆ ಕ್ಲೀನ್ ಚಿಟ್ ನೀಡಲಾಗುತ್ತದೆ.

ವಿಚಿತ್ರವೆಂದರೆ, ವಿದ್ಯಾವಂತರು/ಪ್ರಜ್ಞಾವಂತರು ಎನಿಸಿಕೊಂಡ ಸಾಕಷ್ಟು ಮಂದಿಯೂ ಈ ಬಾಬ್ತಿನಲ್ಲಿ ಪಾಲುದಾರರೇ; ಇಂಥವರು ಬೈಕ್‌ನಲ್ಲಿ ಹೋಗುತ್ತಾ ಕಸದ ಚೀಲವನ್ನು ಮೆಲ್ಲಗೆ ರಸ್ತೆಯ ಬದಿಗೆ ಒಗೆಯುವುದು, ಕಾರ್‌ನಲ್ಲಿ ಹೋಗುವಾಗ ಕಿಟಕಿಯ ಗಾಜನ್ನು ಮೆಲ್ಲಗೆ ಇಳಿಸಿ ಕಸದ ಚೀಲವನ್ನು ಗಟಾರಕ್ಕೆ ಒಗೆಯುವುದು ತೀರಾ ಸಾಮಾನ್ಯವಾದ ದೃಶ್ಯ.

ಇತ್ತೀಚೆಗೆ ಬಡಾವಣೆಯೊಂದರಲ್ಲಿ, ಕಸದ ಚೀಲವನ್ನೆಸೆದ ಕಾರನ್ನು ತಡೆದು ನಿಲ್ಲಿಸಿ, ಅವರು ಒಗೆದ ಕಸವನ್ನು ಅವರ ಕಾರಿನಲ್ಲಿಯೇ ತುರುಕಿ ಕಳಿಸಿದ ಘಟನೆ ನಡೆದಿದೆ. ಆ ಕಾರಿನವರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದರಿಂದ, ಈ ದೃಶ್ಯಾವಳಿಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಿಲ್ಲ.

ಇಂಥ ಬೆಳವಣಿಗೆಗಳು ನಿಲ್ಲಬೇಕು ಎಂದಾದಲ್ಲಿ, ಪ್ರತಿದಿನವೂ ನಿಗದಿತ ಸಮಯಕ್ಕೆ ಮನೆ ಮುಂದೆಯೇ ಬರುವ ಆಟೋ-ಟಿಪ್ಪರ್‌ಗಳಿಗೆ ಕಸವನ್ನು ಹಾಕಬೇಕು, ಹಸಿ ಮತ್ತು ಒಣಕಸವನ್ನು ವಿಂಗಡಣೆ ಮಾಡಿ ಹಾಕಬೇಕು. ಜತೆಗೆ, ಟಿಪ್ಪರ್‌ಗಳ ಸಮಯಪಾಲನೆ ಹಾಗೂ ಕಾರ್ಯನಿರ್ವಹಣೆಯ ಮೇಲೆ ಹದ್ದಿನಕಣ್ಣು ಇಡುವ ಅಗತ್ಯವೂ ಇದೆ.

ಕಸದ ವಿಲೇವಾರಿಯು ನಗರಪಾಲಿಕೆ ಮತ್ತು ಜನತೆಯ ಜಂಟಿ ಹೊಣೆಯಾಗಿರುತ್ತದೆ ಎಂಬುದನ್ನು ಮರೆಯದಿರೋಣ.

**- ರಮಾನಂದ** ಶರ್ಮ

> ಬೇಕಾಬಿಟ್ಟಿಯಾಗಿ ಕಸ ಎಸೆಯುವವರನ್ನು ನಿಖರವಾಗಿ ಗುರುತಿಸಲು ನಗರಪಾಲಿಕೆಯ ಮಾರ್ಷಲ್‌ಗಳ ಸೇವೆಯನ್ನು ಮತ್ತು ಸಿಸಿಟಿವಿಗಳನ್ನು ಜಿಬಿಎ ಬಳಸುತ್ತಿದೆ. ಮನೆಮನೆಯಿಂದ ಕಸ/ತ್ಯಾಜ್ಯದ ಸಂಗ್ರಹಣೆಗೆ ಹೆಚ್ಚುವರಿ ಟಿಪ್ಪರ್‌ಗಳನ್ನು ಸಜ್ಜುಗೊಳಿಸಲು, ರಾತ್ರಿ ವೇಳೆ ಕೂಡ ಅವುಗಳ ಸೇವೆಯನ್ನು ಒದಗಿಸಲು, ನಿಗದಿತ ಸ್ಥಳಗಳಲ್ಲಿ ಕಸದ ಕಿಯೋಸ್ಕ್‌ಗಳನ್ನು ಸ್ಥಾಪಿಸಲು ಜಿಬಿಎ ಮುಂದಾಗಿದೆ.

## 05-11-2025 ದಿನ ಭವಿಷ್ಯ

**ಮೇಷ:** ಆರೋಗ್ಯದ ಬಗ್ಗೆ ಸ್ವಲ್ಪ ಗಮನ ನೀಡಬೇಕು. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಒಂದು ಅಂಚೆಯ ಮೂಲಕ ಬಂದ ಪತ್ರ ಇಡೀ ಕುಟುಂಬಕ್ಕೆ ಸಂತೋಷದ ಸುದ್ದಿ ತರುತ್ತದೆ. ಮನ್ಮಥನ ಬಾಣದಿಂದ ತಪ್ಪಿಸಿಕೊಳ್ಳುವ ಅವಕಾಶ ಕಡಿಮೆಯಿದೆ.

**ವೃಷಭ:** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸುವುದು ನಿಮ್ಮ ಕಾಯಿಲೆಯನ್ನು ಇನ್ನಷ್ಟು ಉಲ್ಬಣಿಸಬಹುದಾದ್ದರಿಂದ ಹಾಗೆ ಮಾಡಬೇಡಿ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ. ಪ್ರೀತಿಪಾತ್ರರು ಪ್ರಣಯದ ಮೂಡ್‌ನಲ್ಲಿರುತ್ತಾರೆ.

**ಮಿಥುನ:** ಕುಟುಂಬದ ವೈದ್ಯಕೀಯ ವೆಚ್ಚದಲ್ಲಿ ಹೆಚ್ಚಳವನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ. ಇಂದು ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ. ಈ ದಿನ ನಿಮಗೆ ಗುಲಾಬಿಗಳ ಸುಗಂಧವನ್ನು ತರುತ್ತದೆ.

**ಕರ್ಕಾಟಕ:** ನಿಮ್ಮ ಹಠಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಅದನ್ನು ನಿಮ್ಮ ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನಿಮ್ಮ ವಿವಾಹಿತ ಜೀವನ ಎಂದಿಗೂ ಹೆಚ್ಚು ವರ್ಣರಂಜಿತವಾಗಿರಲಿಲ್ಲ.

**ಸಿಂಹ:** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ.

**ಕನ್ಯಾ:** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು-ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ-ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ- ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುತ್ತದೆ ಮತ್ತು ನಿಮ್ಮ ಮನಸ್ಸನ್ನು ಪಕ್ವಗೊಳಿಸುತ್ತದೆ.

**ತುಲಾ:** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ. ಇಂದಿನ ದಿನ ನೀವು ನಿಮ್ಮ ವ್ಯಾಪಾರಕ್ಕೆ ಹೊಸ ಎತ್ತರವನ್ನು ನೀಡಬಹುದು. ಬಿಕ್ಕಟ್ಟಿನ ಸಮಯದಲ್ಲಿ ನಿಮಗೆ ಸಹಾಯ ಮಾಡಿದ ಸಂಬಂಧಿಗಳಿಗೆ ನಿಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ.

**ವೃಶ್ಚಿಕ:** ನಿರಾಶಾದಾಯಕ ಮನೋಭಾವವು ಕೇವಲ ನಿಮ್ಮ ಅವಕಾಶಗಳನ್ನು ಸೀಮಿತಗೊಳಿಸುವುದಷ್ಟೇ ಅಲ್ಲದೇ ದೇಹದ ಸಾಮರಸ್ಯವನ್ನೂ ಭಂಗಪಡಿಸುವುದರಿಂದ ಅವುಗಳನ್ನು ತಡೆಯಬೇಕು. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ದುರ್ಬಲವಾಗುತ್ತದೆ.

**ಧನು:** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು. ಈ ರಾಶಿಚಕ್ರದ ವ್ಯಾಪಾರಿಗಳಿಗೆ ಯಾವುದೇ ಹಳೆಯ ಹೂಡಿಕೆಯ ಕಾರಣದಿಂದಾಗಿ ನಷ್ಟವಾಗುವ ಸಾಧ್ಯತೆ ಇದೆ.

**ಮಕರ:** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ. ಪ್ರೀತಿಯಲ್ಲಿ ಬೀಳುವುದು ಇಂದು ನಿಮಗೆ ಕೆಟ್ಟದಾಗಿರಬಹುದಾದ್ದರಿಂದ ನೀವು ಜಾಗರೂಕರಾಗಿರಿ.

**ಕುಂಭ:** ಪತ್ನಿ ನೀವು ಹುರಿದುಂಬಿಸಬಹುದು. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ನಿಮ್ಮ ಸಂಗಾತಿಯ ಸಂಗದಲ್ಲಿ- ಆರಾಮ ಮತ್ತು ಪ್ರೀತಿಯನ್ನು ಪಡೆಯಿರಿ. ನೀವು ಮೊದಲ ನೋಟದಲ್ಲೇ ಪ್ರೀತಿಯಲ್ಲಿ ಬೀಳಬಹುದು. ಚಿಲ್ಲರೆ ಮತ್ತು ಸಗಟು ವ್ಯಾಪಾರಿಗಳಿಗೆ ಒಳ್ಳೆಯ ದಿನ.

**ಮೀನ:** ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ಸಹೋದರ-ಸಹೋದರಿಯರ ಸಹಾಯದಿಂದ ಇಂದು ನೀವು ಆರ್ಥಿಕವಾಗಿ ಲಾಭವನ್ನು ಪಡೆಯಬಹುದು. ನಿಮ್ಮ ಸಹೋದರ ಸಹೋದರಿಯರ ಸಲಹೆ ತೆಗೆದುಕೊಳ್ಳಿ ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ.

# ಪುಟಿನ್ ಹಿಂದಿನ ದೈತ್ಯಶಕ್ತಿ ಯಾರು ಗೊತ್ತಾ?

> ಉಕ್ರೇನ್ ದೇಶದ ಮೇಲಿನ ಹಿಡಿತಕ್ಕಾಗಿ ಹೊಡೆದಾಡುವ ಸಮಯದಲ್ಲಿ ನೇರಾ ನೇರ ಅಮೆರಿಕವನ್ನ ಉಪೇಕ್ಷಿಸಿ, ಜಾಗತಿಕ ಮಟ್ಟದ ಒತ್ತಡಗಳಿಗೂ ಮಣಿಯದೆ ಉಕ್ರೇನ್ ದೇಶದ ಹತ್ತಿರತ್ತಿರ 8 ಪ್ರತಿಶತ ಜಾಗವನ್ನ ರಷ್ಯಾ ಆಕ್ರಮಿಸಿದೆ. ಉಕ್ರೇನ್‌ನ ಕ್ರಿಮಿಯಾ ನಗರ ಮತ್ತು ಇತರ ಪ್ರಮುಖ ನಾಲ್ಕು ನಗರಗಳ ಮೇಲೆ ರಷ್ಯಾ ಹಿಡಿತ ಹೊಂದಿದೆ.



ವಿಶ್ವರಂಗ ಪುಟಿನ್ ಎಂದಾಕ್ಷಣ ನಿಮ್ಮ ಮನಸ್ಸಿನಲ್ಲಿ ರಷ್ಯಾದ ಅಧ್ಯಕ್ಷ, ಬಲಶಾಲಿ ನಾಯಕ ಎನ್ನುವ ಚಿತ್ರಣ ಮೂಡುತ್ತದೆ. ಆದರೆ ಪುಟಿನ್ ಹಿಂದಿನ ಶಕ್ತಿ ಅಥವಾ ಪುಟಿನ್‌ನ ಮಿದುಳು ಎಂದು ಹೆಸರುವಾಸಿಯಾಗಿರುವ ವ್ಯಕ್ತಿಯ ಬಗ್ಗೆ ಹೆಚ್ಚು ತಿಳಿದಿರಲು ಸಾಧ್ಯವಿಲ್ಲ. ಈ ವ್ಯಕ್ತಿಯ ಚಿಂತನೆಗಳನ್ನ ಪುಟಿನ್ ಕಾರ್ಯರೂಪಕ್ಕೆ ತರುತ್ತಿದ್ದಾರೆ.

ಅಂದರೆ ರಷ್ಯಾ ದೇಶ ಮುಂದಿನ ದಿನಗಳಲ್ಲಿ ಹೇಗಿರಬೇಕು, ಜಗತ್ತಿನಲ್ಲಿ ರಷ್ಯಾದ ಪಾತ್ರವೇನು? ಇತ್ಯಾದಿಗಳನ್ನ ನಿರ್ಧರಿಸುವುದು ಇವರು. ಯಾರಿವರು? ಇವರು ಅಲೆಕ್ಸಾಂಡರ್ ದುಗಿನ್. ಸೋವಿಯತ್ ಯೂನಿಯನ್ ಛಿದ್ರವಾದದ್ದು ಎಲ್ಲರಿಗೂ ತಿಳಿದಿರುವ ವಿಷಯ. ಅಮೆರಿಕ ಇದರ ಹಿಂದಿನ ಶಕ್ತಿ ಎನ್ನುವುದು ಕೂಡ ರಹಸ್ಯವೇನಲ್ಲ.

ಹೀಗೆ ಸೋವಿಯತ್ ಯೂನಿಯನ್‌ನಿಂದ ಬೇರ್ಪಟ್ಟು 15 ಹೊಸ ದೇಶಗಳು ನಿರ್ಮಾಣವಾದವು. ನಮಗೆ ಇಷ್ಟು ವಿಷಯ ಮಾತ್ರ ತಿಳಿದಿರುತ್ತದೆ. ಜಾರ್ಜಿಯಾ, ಉಕ್ರೇನ್ ಮುಂತಾದ ದೇಶಗಳಲ್ಲಿ ಆಂತರಿಕ ಕಲಹ ಶುರುವಾಗಿ ಆ ದೇಶಗಳು ಇನ್ನಿಲ್ಲದ ಸಾವು-ನೋವಿನ ಜತೆಗೆ ಇಡೀ ನಗರವೇ ಸ್ಮಶಾನ ಎನ್ನುವ ಮಟ್ಟಿಗೆ ಹಾಳಾದವು.

ಹೀಗೆ ಅಂದಿನ ಶಕ್ತಿಶಾಲಿ ಒಕ್ಕೂಟವನ್ನ ಛಿದ್ರಗೊಳಿಸಿದ್ದರ ಪರಿಣಾಮ ಸೋವಿಯತ್ ಯೂನಿಯನ್‌ನ ಹೃದಯವಾಗಿದ್ದ ರಷ್ಯಾ ಬಹಳ ಪೆಟ್ಟು ತಿಂದಿತು. ಈ ರೀತಿಯ ವಿಭಜನೆ 1991ರಲ್ಲಿ ಆಗುತ್ತದೆ. ಆ ನಂತರ ರಷ್ಯಾ ಹಲವು ವರ್ಷ ಯಾವುದೇ ಸಿದ್ಧಾಂತವಿಲ್ಲದೆ ವೇಳೆಯನ್ನ ಕಳೆಯುತ್ತದೆ. 2000ನೇ ಇಸವಿಯ ವೇಳೆಗೆ ಪುಟಿನ್ ಅಧಿಕಾರವನ್ನ ಪಡೆಯುತ್ತಾರೆ.

ಒಂದೆರಡು ವರ್ಷದಲ್ಲಿ ತೈಲದ ಮೇಲಿನ ಹಿಡಿತವನ್ನ ಸಂಪಾದಿಸುತ್ತಾರೆ. ಜಗತ್ತಿಗೆ ಬೇಕಾದ ಎನರ್ಜಿ ಮೂಲಗಳ ಮೇಲೆ ಮತ್ತು ತೈಲದ ಮೇಲಿನ ಹಿಡಿತ ರಷ್ಯಾವನ್ನ ಮತ್ತೆ ಒಂದಷ್ಟು ಆರ್ಥಿಕವಾಗಿ ಪುನರುಜ್ಜೀವನಗೊಳಿಸುತ್ತವೆ. ಈ ಸಮಯದಲ್ಲಿ ಪುಟಿನ್‌ಗೆ ಮಾರ್ಗದರ್ಶನ ಮಾಡಲು ಗುರುವಿನಂತೆ ಸಿಕ್ಕವರು ಅಲೆಕ್ಸಾಂಡರ್ ದುಗಿನ್.

ಇವರು ತಮ್ಮ ಅನೇಕ ಭಾಷಣಗಳಲ್ಲಿ ಅಮೆರಿಕ ನಮ್ಮ ಮೊದಲ ಶತ್ರು ಎಂದು ಮುಚ್ಚುಮರೆಯಿಲ್ಲದೆ ಹೇಳುತ್ತಾರೆ. ರಾಷ್ಟ್ರೀಯವಾದ ಇವರ ಐಡಿಯಾಲಜಿ. ಟಿವಿ, ರೇಡಿಯೋ ಇತರ ಎಲ್ಲಾ ಮಾಧ್ಯಮಗಳು ಕೂಡ ಕೇವಲ ಮತ್ತು ಕೇವಲ ರಾಷ್ಟ್ರೀಯವಾದಕ್ಕೆ ಸೀಮಿತವಾಗಿರಬೇಕು ಎನ್ನುವ ತತ್ವದ ಉಗ್ರ ಪ್ರತಿಪಾದಕರು ಇವರು. ಇಷ್ಟೇ ಅಲ್ಲದೆ ಅಮೆರಿಕನ್ ಜೀವನ್‌ಶೈಲಿ ನಮ್ಮದಲ್ಲ, ರಷ್ಯಾ ತನ್ನದೇ ಆದ ಸಾಂಸ್ಕೃತಿಕ ನೆಲೆಯನ್ನ ಹೊಂದಿದೆ ಎಂದು ಪ್ರತಿಪಾದಿಸುವ ಅತ್ಯಂತ ರಿಲೀಜಿಯಸ್ ಮನಸ್ಥಿತಿ ಕೂಡ ಹೊಂದಿದ್ದಾರೆ.

ಹೀಗಾಗಿ 2000ದಿಂದ ಈಚೆಗೆ ರಷ್ಯಾದಲ್ಲಿ ಚರ್ಚು ಬಹಳ ಪ್ರಾಮುಖ್ಯವನ್ನು ಪಡೆದಿದೆ. ದೇಶದ 70 ಪ್ರತಿಶತ ಜನರು ಬಹಳ ಧಾರ್ಮಿಕ ಮನೋಭಾವವನ್ನ ಹೊಂದಿದ್ದಾರೆ ಎನ್ನುತ್ತದೆ ಸಮೀಕ್ಷೆ. ಆ ಮಟ್ಟಿಗೆ ರಷ್ಯಾ ದೇಶವನ್ನ ಆಗಲೇ ಅಲೆಕ್ಸಾಂಡರ್ ದುಗಿನ್ ಪರಿವರ್ತನೆ ಮಾಡಿದ್ದಾರೆ. ಹೀಗೆ ರಷ್ಯಾದಲ್ಲಿ ತಮಗೆ ಬೇಕಾದ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಬದಲಾವಣೆಗಳನ್ನ ಮಾಡಿಕೊಂಡಿದ್ದಷ್ಟೇ ಅಲ್ಲದೆ, ರಷ್ಯಾವನ್ನ ಮತ್ತೆ ಜಗತ್ತಿನ ಪ್ರಮುಖ ದೇಶವನ್ನಾಗಿ ಮಾಡುವ ಉದ್ದೇಶ ಅಲೆಕ್ಸಾಂಡರ್ ದುಗಿನ್ ಅವರದು.

ಹೀಗಾಗಿ ಇವರು ಮುಂದಿನ ನಲವತ್ತು ವರ್ಷದಲ್ಲಿ ರಷ್ಯಾ ಏನು ಮಾಡಬೇಕು ಎನ್ನುವ ನೀಲಿನಕ್ಷೆಯನ್ನ ತಯಾರಿಸಿದ್ದಾರೆ. ಪುಟಿನ್ ಇಂಥ ಪ್ಲಾನ್‌ಗಳನ್ನ ನಿಷ್ಠೆಯಿಂದ ಕಾರ್ಯಗತಗೊಳಿಸಲು ಶ್ರಮಿಸುತ್ತಿದ್ದಾರೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ಅಲೆಕ್ಸಾಂಡರ್ ದುಗಿನ್ ಎಂದರೆ ಪುಟಿನ್‌ರ ಮಿದುಳು, ಪುಟಿನ್‌ರ ಗುರು, ಮಾರ್ಗದರ್ಶಕ ಎನ್ನುವ ಮಾತುಗಳು ಕೇಳಿ ಬರುತ್ತವೆ.

ಇಂಥ ದುಗಿನ್ ಕಾರ್ಯಸಾಧನೆಗೆ ತುಳಿದಿರುವ ಮಾರ್ಗ ಇದೆಯಲ್ಲ ಅದು ಮಾತ್ರ ಅಮೆರಿಕ ದೇಶ ಹಿಡಿದಿದ್ದ ದಾರಿಯೇ, ಇದರಲ್ಲಿ ಯಾವುದೇ ಸಂಶಯವಿಲ್ಲ. ಅವರು ಅಮೆರಿಕವನ್ನ ಉದ್ದೇಶಿಸಿ ನಿಮ್ಮ ದೇಶದಲ್ಲಿ ಗಲಭೆಗಳು, ಕಲಹಗಳು ಆದರೆ ನಿಮಗೆ ನೋವಾಗುತ್ತದೆ ಅಲ್ಲವೇ? ನಮಗೂ ನೋವಾಗಿತ್ತು. ನಿಮ್ಮದೇ ಭಾಷೆಯಲ್ಲಿ ನಿಮಗೆ ಉತ್ತರವನ್ನ ಕೊಡುತ್ತಿದ್ದೇವೆ ಅಷ್ಟೇ ಎಂದು ರಾಜಾ ರೋಷವಾಗಿ ಹೇಳಿಕೆಯನ್ನ ನೀಡುತ್ತಾರೆ. ಉಕ್ರೇನ್ ದೇಶದ ಮೇಲಿನ ಹಿಡಿತಕ್ಕಾಗಿ ಹೊಡೆದಾಡುವ ಸಮಯದಲ್ಲಿ ನೇರಾ ನೇರ ಅಮೆರಿಕವನ್ನ ಉಪೇಕ್ಷಿಸಿ, ಜಾಗತಿಕ ಮಟ್ಟದ ಒತ್ತಡಗಳಿಗೂ ಮಣಿಯದೆ ಉಕ್ರೇನ್ ದೇಶದ ಹತ್ತಿರತ್ತಿರ 8 ಪ್ರತಿಶತ ಜಾಗವನ್ನ ರಷ್ಯಾ ಆಕ್ರಮಿಸಿದೆ. ಉಕ್ರೇನ್‌ನ ಕ್ರಿಮಿಯಾ ನಗರ ಮತ್ತು ಇತರ ಪ್ರಮುಖ ನಾಲ್ಕು ನಗರಗಳ ಮೇಲೆ ರಷ್ಯಾ ಹಿಡಿತ ಹೊಂದಿದೆ. ಇದು ಜಾಗತಿಕ ಮಟ್ಟದಲ್ಲಿ ಕಾನೂನುಬಾಹಿರವೆಂದು ಪರಿಗಣಿಸಲ್ಪಟ್ಟಿದೆ. ಇದ್ಯಾವುದಕ್ಕೂ ಸೊಪ್ಪು ಹಾಕದೆ ರಷ್ಯಾ ತನ್ನ ಕಾರ್ಯಸಾಧನೆಯತ್ತ ಚಿತ್ತ ಹರಿಸಿದೆ.

ರಷ್ಯಾದಲ್ಲಿ ಇಂದು ಧಾರ್ಮಿಕತೆ ಮತ್ತು ರಾಷ್ಟ್ರೀಯವಾದ ಮರಳಿ ಮುಂಚೂಣಿಗೆ ಬಂದಿವೆ. ಪಾಶ್ಚಾತ್ಯ ಜೀವನಶೈಲಿಯ ಬಗ್ಗೆ ಇಲ್ಲಿ ಅಸಮಾಧಾನ ಹೆಚ್ಚಾಗಿದೆ. ದುಗಿನ್ ತಮ್ಮನ್ನ ತಾವೇ ಸಂಪ್ರದಾಯವಾದಿ ಎಂದು ಕರೆದುಕೊಳ್ಳುತ್ತಾರೆ. ನಮ್ಮ ಹಿಂದಿನ ಮೌಲ್ಯಗಳು, ಚರಿತ್ರೆ ನೋಡಿ, ರಷ್ಯಾ ಎಂದಿಗೂ ತನ್ನದೇ ಆದ ಸಾಂಸ್ಕೃತಿಕ ನೆಲಗಟ್ಟು ಹೊಂದಿದೆ. ಅದರ ಆಧಾರದ ಮೇಲೆ ಹೊಸ ಮತ್ತು ಪ್ರಬಲ ರಷ್ಯಾವನ್ನ ಮರಳಿ ನಿರ್ಮಿಸುವುದು ನಮ್ಮ ಕರ್ತವ್ಯ ಎನ್ನುವ ವಾದದ ಪ್ರತಿಪಾದಕ ಅಲೆಕ್ಸಾಂಡರ್ ದುಗಿನ್.

ಚಾಣಕ್ಯ ಮತ್ತು ಚಂದ್ರಗುಪ್ತ ಮೌರ್ಯ ತಕ್ಷಣ ನೆನಪಿಗೆ ಬರುತ್ತಾರೆ ಅಲ್ಲವೇ? ನನಗೆ ಅಮಿತ್ ಶಾ ಮತ್ತು ನರೇಂದ್ರ ಮೋದಿ ಜೋಡಿ ನೆನಪಾದರು. ನಮ್ಮಲ್ಲಿ ಅಮಿತ್ ಶಾ ಅವರು ದುಗಿನ್ ಸ್ಥಾನವನ್ನು ತುಂಬದಿರಬಹುದು. ಆದರೆ ಅವರು ಮೋದಿಯವರ ಥಿಂಕ್ ಟ್ಯಾಂಕ್ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಟ್ರಂಪ್ ಈ ಬಾರಿ ಅಧಿಕಾರ ವಹಿಸಿಕೊಂಡ ಮರುದಿನದಿಂದ ಆಡುತ್ತಿರುವ ಆಟವನ್ನು ನೋಡಿ ಜಗತ್ತಿಗೆ ಜಗತ್ತೇ ಟ್ರಂಪ್ ಸರಿಯಿಲ್ಲ ಎನ್ನುವ ಮಾತುಗಳನ್ನು ಆಡುತ್ತಿದ್ದರೆ, ದುಗಿನ್ ಅವರು ಮಾತ್ರ ಟ್ರಂಪ್ ಮಹಾಶಯನಿಗೆ ರಷ್ಯಾ ಎಂದರೇನು? ಪುಟಿನ್ ಎಂದರೇನು? ಎನ್ನುವುದು ಈಗ ಹೆಚ್ಚು ಅರ್ಥವಾಗಿರುತ್ತೆ ಎನ್ನುವ ಮಾರ್ಮಿಕ ಮಾತುಗಳನ್ನು ಆಡಿದ್ದರು.

ಮಾರ್ಚ್ 2025ರ ಸಮಯದಲ್ಲಿ ನೇರವಾಗಿ ಟ್ರಂಪ್ ಮಾಡುತ್ತಿರುವುದು ಅಮೆರಿಕದ ದೃಷ್ಟಿಯಿಂದ ಸರಿ ಎನ್ನುವ ಮಾತನ್ನು ಕೂಡ ಆಡಿದ್ದಾರೆ. ಸಂಪ್ರದಾಯವಾದಿ, ಅಲ್ಟ್ರಾ ರಾಷ್ಟ್ರೀಯವಾದಿ ದುಗಿನ್ ಅವರು ಟ್ರಂಪ್ ಅವರನ್ನು ಬೆಂಬಲಿಸುತ್ತಿದ್ದಾರೆಯೇ? ಎನ್ನುವ ಪ್ರಶ್ನೆ ಉದ್ಭವವಾಗುತ್ತೆ. ಪುಟಿನ್ ಮತ್ತು ದುಗಿನ್ ನಡುವೆ ಎಲ್ಲವೂ ಸರಿಯಿದೆಯೇ? ಖಂಡಿತ ಎಲ್ಲಾ ಸರಿಯಿದೆ.

ಪ್ರತಿಯೊಬ್ಬ ನಾಯಕನೂ ತನ್ನ ದೇಶದ ಒಳಿತಿಗೆ ದುಡಿಯಬೇಕು. ದೇಶ ಮೊದಲು ಎನ್ನುವುದು ದುಗಿನ್ ಅವರ ಮಂತ್ರ. ನಮ್ಮ ನರೇಂದ್ರ ಮೋದಿಯವರು ಪುಟಿನ್ ಜತೆಗೆ ವಿಶೇಷ ಬಾಂಧವ್ಯ ಹೊಂದಿರುವುದರ ಕಾರಣ ನಿಮಗೆ ಗೊತ್ತಾಯ್ತು ಎಂದುಕೊಳ್ಳುವೆ. ಇವತ್ತು ಜಗತ್ತು ಯಾವ ಪರಿಸ್ಥಿತಿಯಲ್ಲಿದೆ ಎಂದರೆ ಎಲ್ಲಾ ದೇಶಗಳೂ ಒಂದಲ್ಲ ಒಂದು ರೀತಿಯಲ್ಲಿ ಒಂದರ ಮೇಲೊಂದು ಅವಲಂಬಿಸಿವೆ.

ಚೀನಾ ತನ್ನ ಪದಾರ್ಥವನ್ನು ಅಮೆರಿಕಕ್ಕೆ ಮಾರಬೇಕು; ಇಲ್ಲವಾದಲ್ಲಿ ತನ್ನ ಉತ್ಪಾದನಾ ಸಾಮರ್ಥ್ಯವನ್ನು ಅದು ಕಳೆದುಕೊಳ್ಳುತ್ತದೆ. ಇದರ ಜತೆಗೆ ತನ್ನ ರಿಸರ್ವ್ಸ್ ಅನ್ನು ಅದು ಅಮೆರಿಕನ್ ಡಾಲರ್‌ನಲ್ಲಿ ಹೊಂದಿದೆ. ಅಮೆರಿಕನ್ ಬಾಂಡ್ ಅನ್ನು ಕೊಂಡಿದೆ. ಅಮೆರಿಕ ಕುಸಿತ ಕಂಡರೆ, ಅತಿ ಹೆಚ್ಚು ಹೊಡೆತ ಬೀಳುವುದು ಚೀನಾ ಮತ್ತು ಜಪಾನ್ ದೇಶಗಳಿಗೆ. ಅಮೆರಿಕ ಕೂಡ ಚೀನಾ ಪದಾರ್ಥಗಳು ಬೇಡ ಎಂದರೆ ವಾರದಲ್ಲಿ ಅವಸಾನ ಹೊಂದುತ್ತದೆ.

ವಿಶ್ವದ ಎರಡು ಅತಿ ದೊಡ್ಡ ಇಕಾನಾಮಿಗಳು ಕುಸಿದರೆ ಪೂರ್ಣ ವಿಶ್ವ ಕುಸಿದಂತೆ! ಚೀನಾ ತನ್ನ ಅಮೆರಿಕನ್ ರಿಸರ್ವ್ ಕಡಿಮೆ ಮಾಡಿಕೊಂಡು ಆ ಹಣದಲ್ಲಿ ಚಿನ್ನವನ್ನು ಕೊಂಡುಕೊಳ್ಳುತ್ತಿದೆ. ಚೀನಾವನ್ನು ನೋಡಿ ಜಪಾನ್, ಭಾರತ ಕೂಡ ಚಿನ್ನವನ್ನು ಕೊಂಡುಕೊಳ್ಳುತ್ತಿವೆ. ಇಂದಿಗೆ ರಷ್ಯಾ ಅತಿ ಹೆಚ್ಚು ಚಿನ್ನದ ರಿಸರ್ವ್ ಮೇಲೆ ಕುಳಿತಿದೆ. ನಾಳೆ ಆಟ ಮತ್ತೆ ಚಿನ್ನದ ಆಧಾರದಲ್ಲಿ ಶುರು ವಾದರೆ ರಷ್ಯಾ ಲೀಡರ್ ಆಗಿ ಹೊರಹೊಮ್ಮುತ್ತದೆ.



ಚೀನಾ, ಜಪಾನ್, ಭಾರತ ಸೇರಿಕೊಂಡು ಸಾಮೂಹಿಕ ನಾಯಕತ್ವದಲ್ಲಿ ಜಗತ್ತು ಮುಂದುವರಿಯುವ ಸಾಧ್ಯತೆ ಹೆಚ್ಚಾಗಿದೆ. ಗ್ಲೋಬಲೈಸಷನ್ ಎನ್ನುವ ಆಟವನ್ನು ಅಮೆರಿಕ ಹುಟ್ಟು ಹಾಕದಿದ್ದರೆ ಜಗತ್ತು ಇಂದಿನ ಕೆಟ್ಟ ಪರಿಸ್ಥಿತಿಯನ್ನು ಕಾಣುವ ಅವಶ್ಯಕತೆ ಬರುತ್ತಿರಲಿಲ್ಲ. ಇದೀಗ ಅಮೆರಿಕಕ್ಕೆ ಗ್ಲೋಬಲೈಸೇಷನ್ ಎಂಬುದು ದೊಡ್ಡ ತಪ್ಪು ಎನ್ನುವುದರ ಅರಿವಾಗಿದೆ.

ಇದು ಅರಿವಾಗುವ ವೇಳೆಗೆ ಅದನ್ನು ಬದಲಾಯಿಸಲಾಗದ ಮಟ್ಟಿಗೆ ಅದು ಬದಲಾವಣೆ ಕಂಡು ಬಿಟ್ಟಿದೆ. ಇವತ್ತಿಗೆ ಇವತ್ತೇ ಹೊಸ ವ್ಯವಸ್ಥೆ ಕಟ್ಟಬೇಕು ಎಂದರೂ ಅದಕ್ಕೂ ದಶಕಗಳು ಬೇಕು, ಆ ಮಟ್ಟಿಗೆ ಅವಲಂಬನೆ ಬೆಳೆದು ಬಿಟ್ಟಿದೆ. ಆದರೆ ಅಮೆರಿಕ, ಚೀನಾ, ಯುರೋಪಿಯನ್ ಯೂನಿಯನ್‌ಗಳಿಗೆ ದಶಕಗಳು ಕಾಯುವ ತಾಳ್ಮೆ, ಸಂಯಮ ಎರಡೂ ಇಲ್ಲ. ಅವಕ್ಕೆ ತಕ್ಷಣ ಈ ಆಟವನ್ನು ಮುಗಿಸಿ, ಹೊಸ ಆಟಕ್ಕೆ ಸಿದ್ಧರಾಗಬೇಕು ಎನ್ನುವ ಹಪಾಹಪಿ ಶುರುವಾಗಿದೆ. ಹೀಗಾಗಿ ಅವು ರಿ-ಸೆಟ್ ಬಟನ್ ಒತ್ತುವ ತರಾತುರಿಯಲ್ಲಿವೆ. ಗ್ಲೋಬಲೈಸೇಷನ್ ಎನ್ನುವ ಆಟವನ್ನು ರಿ-ಸೆಟ್ ಬಟನ್ ಒತ್ತಿ ಕೂಡ ಅಳಿಸಲಾಗದು ಎಂಬುದು ಅವಕ್ಕೆ ಗೊತ್ತಿದೆ!

ಹೀಗಾಗಿ ಅವು ಕಂಟ್ರೋಲ್ಡ್ ಗ್ಲೋಬಲೈಸೇಷನ್ ಎನ್ನುವ ಹೊಸ ಆಟವನ್ನು ಶುರು ಮಾಡಲು ಬಯಸುತ್ತಿವೆ. ಇದರ ಚುಕ್ಕಾಣಿ ಯಾರ ಕೈಗೆ ಸಿಗುತ್ತದೋ ಅದು ಇನ್ನೊಂದೆರಡು ಶತಮಾನ ರಾಜ್ಯವಾಳುತ್ತದೆ. ಈ ಬಾರಿ ಈ ಅಧಿಕಾರದ ಚುಕ್ಕಾಣಿ ಒಂದು ದೇಶದ ಕೈಗೆ ಸಿಗುವ ಸಾಧ್ಯತೆ ಕಡಿಮೆ.

ಬಲಿಷ್ಠ ಭಾರತವು ಅಮೆರಿಕ ಮತ್ತು ಚೀನಾ ಎರಡಕ್ಕೂ ಬೇಕಿಲ್ಲ. ರಷ್ಯಾ ದೇಶವು ಭಾರತದೊಂದಿಗೆ ಅತ್ಯುತ್ತಮ ಬಾಂಧ್ಯವವನ್ನು ಹೊಂದಿದೆ. ಭಾರತ ಮತ್ತು ಚೀನಾದ ಮಧ್ಯೆ ಇರುವ ತಡೆಗೋಡೆಯನ್ನು ಕೆಡವಲು ಮತ್ತು ಒಟ್ಟಾಗಿ ಹೆಜ್ಜೆಹಾಕಲು ರಷ್ಯಾ ಮಧ್ಯವರ್ತಿಯಂತೆ ಕೆಲಸ ಮಾಡುತ್ತಿದೆ. ಗ್ಲೋಬಲೈಸೇಷನ್ ಎನ್ನುವ ಪದ ಸವಕಲಾಗಿದೆ.

ಇವತ್ತು ಅದು ಯಾರಿಗೂ ಬೇಡವಾದ ಕೂಸು. ಪ್ರತಿ ದೇಶವೂ ಇಂದು ಲೋಕಲೈಸೇಷನ್, ರಾಷ್ಟ್ರೀಯವಾದದ ಹಿಂದೆ ಬಿದ್ದಿವೆ. ಇದೆಷ್ಟು ವರ್ಷ ಎನ್ನುವುದನ್ನು ಕಾದು ನೋಡಬೇಕು. ಏಕೆಂದರೆ ಬಹಳ ದೊಡ್ಡ ಕನಸು ಇಟ್ಟುಕೊಂಡೇ ಅಮೆರಿಕ ಹುಟ್ಟು ಹಾಕಿದ ಗ್ಲೋಬಲೈಸೇಷನ್ ಪರಿಕಲ್ಪನೆಯು ಮೂರು ದಶಕದಲ್ಲಿ ಅಂತ್ಯ ಕಾಣುತ್ತಿದೆ. ಜಗತ್ತಿನೆಡೆ ವಲಸಿಗರನ್ನು ಕೆಲಸ ಕದಿಯಲು ಬಂದವರು ಎನ್ನುವಂತೆ ನೋಡಲಾಗುತ್ತಿದೆ.

ಇದು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ತೀವ್ರವಾಗಿ, ರಾಷ್ಟ್ರೀಯವಾದ ಇನ್ನಷ್ಟು ಮುನ್ನೆಲೆಗೆ ಬರಲಿದೆ. ಬದಲಾವಣೆ ಜಗದ ನಿಯಮ; ಆದರೆ ಜಾಗತಿಕ ತಿಕ್ಕಾಟಗಳಲ್ಲಿ ಸಾವಿರಾರು ಕುಟುಂಬಗಳ, ಲಕ್ಷಾಂತರ ಜನರ ಬದುಕು ವ್ಯತ್ಯಯವಾಗಲಿದೆ.

ಅಮೆರಿಕ ತಾನು ಹುಟ್ಟು ಹಾಕಿದ ಆಟದಲ್ಲಿ ಹೀನಾಯವಾಗಿ ಸೋತಿದೆ. ಜಗತ್ತಿಗೆ ಅಮೆರಿಕನ್ ಉತ್ಪನ್ನಗಳನ್ನು ಮಾರಿ ಹೇರಳವಾಗಿ ಲಾಭ ಮಾಡಿಕೊಳ್ಳುವ ಉದ್ದೇಶ ಹೊಂದಿದ್ದ ಆ ದೇಶದ ಹೂಡಿಕೆದಾರರು ಹೆಚ್ಚು ಲಾಭ ಬರುತ್ತದೆ ಎನ್ನುವ ಕಾರಣಕ್ಕೆ ಚೀನಾ, ಭಾರತ, ಇಂಡೋನೇಷ್ಯಾ, ಫಿಲಿಪೈನ್ಸ್ ಹೀಗೆ ಎಲ್ಲಾ ದೇಶಗಳಲ್ಲಿ ಹೂಡಿಕೆ ಮಾಡಿದರು. ಸದ್ದಿಲ್ಲದೆ ಮೂರು ದಶಕದಲ್ಲಿ ಅಮೆರಿಕ ಜಗತ್ತಿನ ಬೇರೆ ದೇಶಗಳ ಮೇಲೆ ಅವಲಂಬಿತ ದೇಶವಾಗಿ ಮಾರ್ಪಾಟಾಗಿ ಹೋಯ್ತು.

ಎಚ್ಚೆತ್ತು ರಾಷ್ಟ್ರೀಯವಾದಕ್ಕೆ ಅದು ತಿರುಗಿಕೊಂಡಿದೆ. ರಷ್ಯಾ ಈ ಕೆಲಸವನ್ನು, ಪುಟಿನ್ ಅಧಿಕಾರ ಹಿಡಿದ ಸಮಯದಿಂದ ಮಾಡುತ್ತಿದೆ. ಭಾರತ ಕೂಡ ಕಳೆದ ಒಂದು ದಶಕದಿಂದ ಪೂರ್ಣವಾಗಿ ರಾಷ್ಟ್ರೀಯವಾದದತ್ತ ತಿರುಗಿದೆ. ಚೀನಾ ಕಳೆದ ಮೂರು ದಶಕದಿಂದ ತೀವ್ರ ರಾಷ್ಟ್ರೀಯವಾದವನ್ನು ಬೆಳಸಿಕೊಂಡಿದೆ. ಅಮೆರಿಕ ರಾಷ್ಟ್ರೀಯವಾದದ ಹೊಸ ಆಟಕ್ಕೆ ಲೇಟ್ ಎಂಟ್ರಿ ಕೊಟ್ಟಿದೆ. ಹೀಗಾಗಿ ಹೊಸ ಆಟದಲ್ಲಿನ ಅಡ್ವಾಂಟೇಜ್ ಚೀನಾ, ರಷ್ಯಾ ಮತ್ತು ಭಾರತಕ್ಕೆ ಎಂದು ನಿಸ್ಸಂಶಯವಾಗಿ ಹೇಳಬಹುದು.

**- ರಂಗಸ್ವಾಮಿ** ಎಂ



# ತಾಯಿ - ಶಿಶು ಮರಣ ಸಂಪೂರ್ಣ ನಿಯಂತ್ರಿಸಿ

## ರಾಷ್ಟ್ರೀಯ ಆರೋಗ್ಯ ಅಭಿಯಾನ ಸಭೆಯಲ್ಲಿ ಡಿ.ಸಿ. ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ತಾಯಿ ಮತ್ತು ಶಿಶು ಮರಣ ಪ್ರಮಾಣ ಶೂನ್ಯಕ್ಕೆ ತರುವ ನಿಟ್ಟಿನಲ್ಲಿ ಮುಂಜಾಗ್ರತೆ ವಹಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಬಿ.ಸಿ. ರಾಯ್ ಸಭಾಂಗಣದಲ್ಲಿ ಮಂಗಳವಾರ ರಾಷ್ಟ್ರೀಯ ಆರೋಗ್ಯ ಅಭಿಯಾನ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗರ್ಭಿಣಿ ಸ್ತ್ರೀಯರಿಗೆ ನಿಗದಿತ ಸಮಯದಲ್ಲಿ ನೀಡಬಹುದಾದ ಆರೋಗ್ಯ ಸೇವೆಗಳನ್ನು ತಪ್ಪದೆ ಕಲ್ಪಿಸಲು ಎಚ್ಚರ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರ ಗರ್ಭಿಣಿ ಸ್ತ್ರೀಯರ ಆರೋಗ್ಯಕ್ಕಾಗಿ ವಿವಿಧ ಯೋಜನೆಗಳಡಿ ಸವಲತ್ತುಗಳನ್ನು ಒದಗಿಸುತ್ತಿದೆ. ಆದರೂ ಅವರ ಕೈಗೊಳ್ಳುವುದರ ಜೊತೆಗೆ ಸಮಯದಲ್ಲಿ ಅವರು



ಮರಣ ಹೊಂದಿದ ಸುರಕ್ಷತಾ ಹೆರಿಗೆಗೆ ಕ್ರಮ ವಹಿಸಬೇಕು. ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಹೆರಿಗೆ ಆಗುವುದಕ್ಕೆ ಕಾರಣವೇನು ಎಂಬುದರ ಬಗ್ಗೆ ಕೂಡ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಆಸ್ಪತ್ರೆಗಳಲ್ಲಿ ವಿಳಂಬ ಮಾಡದೆ ವಯಸ್ಸಿನ ಪ್ರಮಾಣ ಪತ್ರ ಹಾಗೂ ವಿಕಲಚೇತನರಿಗೆ ಯು.ಡಿ.ಐ.ಡಿ. ಪ್ರಮಾಣ ಪತ್ರ ನೀಡಲು ಸ್ಪಂದಿಸಿ ಕೆಲಸ ನಿರ್ವಹಿಸುವಂತೆ ನಿರ್ದೇಶನ ನೀಡಿದರಲ್ಲದೆ, ನಮ್ಮ ಕ್ಲಿನಿಕ್ 13 ಇದ್ದು, ಇವುಗಳಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಕ್ರಮ ವಹಿಸಬೇಕು. ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ 5 ತಾಯಿ ಮರಣ ಹೊಂದಿದ್ದಾರೆ. ಇವುಗಳಲ್ಲಿ ನಾಲ್ಕು ಹೊರ ಜಿಲ್ಲೆಗಳಿಂದ ಬಂದವರಾಗಿದ್ದು, ಒಬ್ಬರು ಮಾತ್ರ ಹಾಸನ ಜಿಲ್ಲೆಯರಾಗಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಪೌಷ್ಟಿಕಾಂಶದ ಕೊರತೆ ಎದುರಿಸುತ್ತಿರುವ ಮಕ್ಕಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂದರಲ್ಲದೆ, ಅವರ ಆರೋಗ್ಯ ಸುಧಾರಣೆ ಆಗಿದೆಯಾ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಎಲ್ಲಾ ಮಕ್ಕಳಿಗೆ ಒಳ್ಳೆಯ ಜೀವನ ಕಲ್ಪಿಸುವ ನಿಟ್ಟಿನಲ್ಲಿ ಮೊದಲನೆಯದಾಗಿ ಉತ್ತಮ ಆರೋಗ್ಯಕ್ಕಾಗಿ ಪೌಷ್ಠಿಕ ಆಹಾರ ಒದಗಿಸಲು ಗಮನಹರಿಸಿಬೇಕು ಎಂದ ಅವರು, ಕೂಲಿ ಕಾರ್ಮಿಕರಿಗೆ ಮನಹೋಲಿಸಿ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ತಿಳುವಳಿಕೆ ನೀಡಬೇಕು ಎಂದು ಸೂಚಿಸಿದರು.

ನಿಗದಿತ ಸಮಯದಲ್ಲಿ ಲಸಿಕೆ ಹಾಕಿಸಲು ಹಾಗೂ ಪೌಷ್ಠಿಕ ಆಹಾರ ಒದಗಿಸುವುದರ ಜೊತೆಗೆ ನಿರ್ದಿಷ್ಟ ತೂಕ ಬರುವವರೆಗೆ ಗಮನಿಸುತ್ತಿರಬೇಕು. ಗುಡ್ಡಗಾಡು ಪ್ರದೇಶದಲ್ಲಿರುವ ಗರ್ಭಿಣಿಯರು ಹೆರಿಗೆಗಾಗಿ ನಿರೀಕ್ಷಿತ ದಿನಾಂಕಕ್ಕೆ ಎರಡು ದಿನ ಮುಂಚಿತವಾಗಿ ಆಸ್ಪತ್ರೆಗೆ ಬಂದು ದಾಖಲಾಗುವಂತೆ ವೈದ್ಯರು ತಿಳಿಸಿ ಎಂದರಲ್ಲದೆ, ಎಚ್ಚರ ವಹಿಸಿ ತಪಾಸಣೆ ನಡೆಸಿ ಗಮನ ಹರಿಸಿ ಎಂದು ನಿರ್ದೇಶಿಸಿದರು.

ಒಂದು ಸಮಿತಿ ರಚನೆ ಮಾಡಿ ಯಾವ ಕಾರಣಕ್ಕೆ ಸಾವು ಸಂಭವಿಸಿದೆ ಮತ್ತು ಮರಣ ತಪ್ಪಿಸಲು ಏನು ಮುಂಜಾಗ್ರತೆ ವಹಿಸಬೇಕಾಗಿತ್ತು ಎಂಬುದರ ಬಗ್ಗೆ ಪರಿಶೀಲನೆ ಮಾಡಿ ವರದಿ ನೀಡುವಂತೆ ತಿಳಿಸಿದರಲ್ಲದೆ, ಗಂಡಾಂತರ ಹೆರಿಗೆಗೆ ಹೆಚ್ಚಿನ ಗಮನಹರಿಸಬೇಕು. ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ವೈದ್ಯರು ಲಭ್ಯವಿರುವಂತೆ ಜೊತೆಗೆ ಸಿಬ್ಬಂದಿಗಳು ಸಮವಸ್ತ್ರ ಧರಿಸಿರಬೇಕು, ಆಸ್ಪತ್ರೆಗಳಲ್ಲಿ ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡಿ ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಶಾಲಾ- ಕಾಲೇಜು ಆವರಣದಿಂದ 200 ಮೀಟರ್‌ನೊಳಗೆ ಯಾವುದೇ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವಿಲ್ಲ, ಈ ನಿಟ್ಟಿನಲ್ಲಿ ಕಾನೂನು ಉಲ್ಲಂಘಿಸಿದರೆ ಕ್ರಮ ವಹಿಸಬೇಕು. ಆಸ್ಪತ್ರೆಗಳ ತ್ಯಾಜ್ಯ ವಿಲೇವಾರಿಗೆ ಆದ್ಯತೆ ನೀಡಿ ವೈಜ್ಞಾನಿಕವಾಗಿ ವಿಲೇ ಮಾಡಲು ಕ್ರಮ ಕೈಗೊಳ್ಳಬೇಕು. ಆರೋಗ್ಯ ಮತ್ತು ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಈ ನಿಟ್ಟಿನಲ್ಲಿ 50 ಕ್ಕಿಂತ ಹೆಚ್ಚು ಹೆಣ್ಣು ಮಕ್ಕಳಿರುವ ಪ್ರೌಢ ಶಾಲೆಗಳಲ್ಲಿ ಸ್ಯಾನಿಟರಿ ಪ್ಯಾಡ್ ವಿಲೇವಾರಿಗೆ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಹೇಳಿದರು.

ಅಪರ ಜಿಲ್ಲಾಧಿಕಾರಿ ಮಂಜುನಾಥ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ|| ನಾಗಪ್ಪ, ಆರ್.ಸಿ.ಹೆಚ್. ಅಧಿಕಾರಿ ಡಾ||ಶಿವಶಂಕರ್, ಡಾ|| ರಂಗಲಕ್ಷ್ಮಿ ಮತ್ತಿತರರು ಹಾಜರಿದ್ದರು.

## ಇಂದಿನಿಂದ ಇ- ಪೌತಿ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನಾದ್ಯಂತ ಇ-ಪೌತಿ ಅಭಿಯಾನವನ್ನು ನ.5ರಿಂದ 22 ರ ವರೆಗೆ ಹಮ್ಮಿಕೊಳ್ಳಲಾಗಿದ್ದು, ರೈತರು ಸಂಬಂಧಪಟ್ಟ ನಾಡಕಚೇರಿ ಹಾಗೂ ತಾಲ್ಲೂಕು ಕಛೇರಿಯಲ್ಲಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಅಗತ್ಯ ದಾಖಲೆಗಳನ್ನು ನೀಡಿ ಅರ್ಜಿಯನ್ನು ಸಲ್ಲಿಸಬಹುದು.

ಕಂದಾಯ ಇಲಾಖೆಯ ಗ್ರಾಮ ಸಹಾಯಕರುಗಳು ಮನೆ ಮನೆಗೆ ತೆರಳಿ ದಾಖಲೆಗಳನ್ನು ಸಂಗ್ರಹಿಸಲಿದ್ದು, ವಂಶವೃಕ್ಷ, ಮರಣ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ ಹಾಗೂ ಗಣಕೀಕೃತ ಪಹಣಿಗಳನ್ನು ನೀಡಬಹುದಾಗಿರುತ್ತದೆ.

ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರುಗಳು ಇ-ಪೌತಿ ಅಭಿಯಾನಕ್ಕೆ ಸಹಕರಿಸಲು ಕೋರಿದೆ. ಇ-ಪೌತಿ ಅರ್ಜಿ ಸಲ್ಲಿಸಿದ ಒಂದು ವಾರದದೊಳಗೆ ತಮ್ಮ ಮೊಬೈಲ್ ಸಂಖ್ಯೆಗೆ OTP ಬರುತ್ತದೆ. ಪೌತಿ ವಾರಸುದಾರರು ಎಲ್ಲರೂ OTP ನೀಡಿದಲ್ಲಿ ಪೌತಿ ಖಾತೆ ದಾಖಲಿಸಲಾಗುವುದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಹಾಸನ ತಹಶೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.19 ರಂದು ಅಕ್ಕ ಕಾರ್ಯಪಡೆಗೆ ಚಾಲನೆ

• ಪ್ರಜೋದಯ ವರದಿ

**ಬೆಂಗಳೂರು:** ಬಾಲ್ಯವಿವಾಹ ತಡೆಗಟ್ಟುವ ಹಾಗೂ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ಹತ್ತಿಕ್ಕುವ ಉದ್ದೇಶದಿಂದ ರಚಿಸಲಾಗಿರುವ ಅಕ್ಕ ಪಡೆಗೆ ಇದೇ 19 ರಂದು ಚಾಲನೆ ನೀಡಲಾಗುತ್ತಿದ್ದು, ಪೂರ್ವಭಾವಿಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಂಗಳವಾರ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಸದಾಶಿವನಗರದಲ್ಲಿರುವ ಡಾ.ಜಿ. ಪರಮೇಶ್ವರ್ ಅವರ ಮನೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭೇಟಿ ನೀಡಿದ್ದರು.

## ಗುಂಡು ಎಸೆತ ಸ್ಪರ್ಧೆ: ಮೂರನೇ ಸ್ಥಾನ



**ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ 4ನೇ ಮಿನಿ ಕ್ರೀಡಾಕೂಟದಲ್ಲಿ ಹಾಸನ ಜಿಲ್ಲೆಯ ಕ್ರೀಡಾಪಟು ಸಿ.ಆರ್ .ಪ್ರಥಮ್, 14 ವಯೋಮಿತಿಯ ಬಾಲಕರ ಗುಂಡು ಎಸೆತ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದ್ದಾನೆ.**

## ವಿಜಯಪುರದಲ್ಲಿ ಮತ್ತೆ ಕಂಪಿಸಿದ ಭೂಮಿ

• ಪ್ರಜೋದಯ ವರದಿ

**ವಿಜಯಪುರ:** ಕಳೆದ ಎರಡು ತಿಂಗಳಿನಿಂದ ಆಗಾಗ್ಗೆ ಭೂಕಂಪನ ಅನುಭವಿಸುತ್ತಿರುವ ವಿಜಯಪುರ ಜಿಲ್ಲೆಯಲ್ಲಿ ಮತ್ತೊಮ್ಮೆ ಭೂಮಿ ಕಂಪಿಸಿದ್ದು ಜನರು ಆತಂಕಗೊಂಡಿದ್ದಾರೆ.

ಮಂಗಳವಾರ ಬೆಳಿಗ್ಗೆ 7.49ರ ಸುಮಾರಿಗೆ ಭೂಕಂಪನ ಅನುಭವ ಆಗಿದೆ. ಜನರಿಗೆ ಭಾರೀ ಸದ್ದಿನೊಂದಿಗೆ ಭೂಮಿ ನಡುಗಿದ ಅನುಭವ ಆಗಿದೆ.

ಈಗಾಗಲೇ ಆತಂಕಕ್ಕೊಳಗಾದ ಗ್ರಾಮಸ್ಥರನ್ನು ಮತ್ತಷ್ಟು ಭಯಭೀತಗೊಳಿಸಿದೆ. ದೀಪಾವಳಿಯ ಸಮಯದಲ್ಲಿ ಇದೇ ರೀತಿಯ ಭೂಕಂಪ ಸಂಭವಿಸಿದ ನಂತರ ಈ ಹೊಸ ಕಂಪನ ಸಂಭವಿಸಿದೆ. ಕಳೆದ ಎರಡು ತಿಂಗಳಲ್ಲಿ ಜಿಲ್ಲೆಯಲ್ಲಿ ಇಂತಹ 13 ಭೂಕಂಪಗಳು ಸಂಭವಿಸಿವೆ.

## ಕನ್ನಡ ಇಡೀ ವಿಶ್ವದಲ್ಲಿಯೇ ಗುರುತಿಸಿಕೊಂಡ ಸದೃಢ ಭಾಷೆ

• ಪ್ರಜೋದಯ ವರದಿ

**ಹಾಸನ:** ನಗರದ ಮಾಸ್ಟರ್ಸ್ ಪದವಿ ಪೂರ್ವ ಕಾಲೇಜಿನಲ್ಲಿ ಸಂಭ್ರಮದ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಎಚ್. ಎಲ್ ಮಲ್ಲೇಶಗೌಡ ಅವರು ಭಾಗವಹಿಸಿ ಮಾತನಾಡಿ, ನಮ್ಮ ಭಾಷೆಗೆ ಸುಮಾರು 2500 ವರ್ಷಗಳ ಇತಿಹಾಸವಿದೆ. ಸಮೃದ್ಧವಾಗಿ ಬೆಳೆದು ಇಡೀ ವಿಶ್ವದಲ್ಲಿಯೇ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಮೂಲ ಕಾರಣ ನಮ್ಮ ನಾಡಿನ ಜನಪದರು. ಕವಿಗಳು, ರಾಜರ ಆಶ್ರಯಗಳು, ಸಂಗೀತಗಾರರು, ವಚನಕಾರರು ಇವರೆಲ್ಲರ ಶ್ರಮದಿಂದ ಅಳಿಸಲಾಗದ



ಭಾಷೆಯಾಗಿ ಬೆಳೆದಿದೆ ಎಂದರು.

ಕನ್ನಡದಲ್ಲಿ 57 ವರ್ಣಮಾಲೆಗಳಿವೆ. ಮಹಾ ಕಾವ್ಯಗಳಿವೆ, ಕವಿಗಳು ಸಂತರು, ಸಂಗೀತಕಾರರು, ವಚನಕಾರರು ಭಾಷೆಯನ್ನು ದುಡಿಸಿಕೊಂಡಿದ್ದಾರೆ. ಇಂತಹ ಸಂಪತ್ಭರಿತ ಭಾಷೆಯನ್ನು ನಮ್ಮ ಮುಂದಿನ ಜನಾಂಗ ಬೆಳಸಿಕೊಂಡು ಹೋಗಬೇಕು ಎಂದು ಹೇಳುತ್ತಾ, ಇಂದು ವಿದ್ಯಾವಂತರ ಸಂಖ್ಯೆ ಹೆಚ್ಚಾಗಿದೆ. ಆದರೆ ವಿದ್ಯೆ ಕಲಿಸಿದ ಗುರುಗಳನ್ನು ಜನ್ಮ ನೀಡಿದ ತಂದೆ ತಾಯಿಗಳನ್ನು ಗೌರವಯುತವಾಗಿ ನಡೆಸಿಕೊಳ್ಳುವವರ ಸಂಖ್ಯೆ ಕ್ಷೀಣಿಸುತ್ತಿದೆ. ಇದು ಸಮಾಜಕ್ಕೆ ಆತ ಆಘಾತಕಾರಿ ಬೆಳವಣಿಗೆ ಎಂದು ವಿಷಾದ ವ್ಯಕ್ತಪಡಿಸಿದರಲ್ಲದೆ, ತತ್ವಪದವನ್ನು ಹೇಳಿ ಸಭಿಕರನ್ನು ರಂಜಿಸಿದರು.

ಮಾಸ್ಟರ್ಸ್ ಪದವಿ ಪೂರ್ವ ಕಾಲೇಜಿನಲ್ಲಿ 2023-24 2024-25 ನೇ ಸಾಲಿನಲ್ಲಿ ಬೋರ್ಡ್ ಪರೀಕ್ಷೆ, ನೀಟ್, ಜೆಇಇ, ಸಿಇಟಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಸ್ಥಾನ ಗಳಿಸಿದ ಆಯ್ದ 10 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ನಗದು ಬಹುಮಾನ ನೀಡಲಾಯಿತು.

ವಿದ್ಯಾರ್ಥಿಗಳಿಂದ ಭರತನಾಟ್ಯ, ನಾಡಗೀತೆ ಹಾಗೂ ಭಾವಗೀತೆಗಳ ಸಾಂಸ್ಕೃತಿಕ ಕಾರ್ಯಕ್ರಮ ಮನಸೂರೆಗೊಂಡಿತು. ಕಾರ್ಯಕ್ರಮದಲ್ಲಿ ಮಾಸ್ಟರ್ಸ್ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಎ. ಹನುಮಂತರಾಯುಡು, ಉಪಾಧ್ಯಕ್ಷರಾದ ಎಚ್.ಸಿ ನಂದಿನಿ, ಕಾರ್ಯದರ್ಶಿ ಗೌಡೇಗೌಡ, ಖಜಾಂಚಿ ಹಾಗೂ ಪ್ರಾಂಶುಪಾಲ ಮಂಜುನಾಥ್ ಪಾಲ್ಗೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಬಿ.ಎಸ್.ಮಂಜುನಾಥ್ ಅವರು ವಹಿಸಿದ್ದರು.

ಆಂಗ್ಲ ಭಾಷಾ ಉಪನ್ಯಾಸಕಿ ಆಶಾ ಸ್ವಾಗತಿಸಿದರು, ಕನ್ನಡ ಉಪನ್ಯಾಸಕ ಸಣ್ಣ ನಂಜೇಗೌಡ ನಿರೂಪಿಸಿದರು. ಎನ್.ಬಿ ನಾಗರತ್ನ ಹೊಂದಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಸೌಹಾರ್ದಯುತ ಬದುಕಿಗೆ ದೇಗುಲಗಳು ಸಹಕಾರಿ

### ಮಾಡಾಳು ನಿರಂಜನ ಪೀಠದ ಶ್ರೀ ರುದ್ರಮುನಿ ಸ್ವಾಮೀಜಿ

• ಪ್ರಜೋದಯ ವರದಿ

**ಮಾಡಾಳು:** ಪೂರ್ವಿಕರು ಹಳ್ಳಿಗಳಲ್ಲಿ ದೇವಸ್ಥಾನಗಳನ್ನು ನಿರ್ಮಿಸಿ ಶಾಂತಿ, ಸೌಹಾರ್ದತೆ ಹಾಗು ಪರಸ್ಪರ ಹೊಂದಾಣಿಕೆಯ ಜೀವನನ್ನು ಕಟ್ಟಿಕೊಳ್ಳಲು ನೆರವಾಗಿದ್ದಾರೆಂದು ಮಾಡಾಳು ನಿರಂಜನ ಪೀಠದ ಶ್ರೀ ರುದ್ರಮುನಿ ಸ್ವಾಮೀಜಿ ಹೇಳಿದರು.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿಯ ದೈವ ಮೂಲೆ ಎಂದೇ ಹೆಸರು ವಾಸಿಯಾಗಿರುವ ಬೊಮ್ಮಸಮುದ್ರ ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಗುರು ಚನ್ನಬಸವೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಹಾಗು ಶಿಖರ ಕಳಸಾರೋಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಬೊಮ್ಮಸಮುದ್ರ ಪುಟ್ಟ ಗ್ರಾಮವಾದರೂ ಎಲ್ಲಾ ರಾಜಕೀಯ ಪಕ್ಷಗಳ ಕಾರ್ಯಕರ್ತರಿದ್ದಾರೆ. ಧಾರ್ಮಿಕ ವಿಚಾರದಲ್ಲಿ ಯಾರೂ ರಾಜಕೀಯ ಬೆರೆಸದೆ ಒಗ್ಗಟ್ಟಿನಿಂದ ಕಾರ್ಯಕ್ರಮ ಹಮ್ಮಿಕೊಂಡಿರುವುದು ಅಪಾರ ಖುಷಿ ತಂದಿದೆ. ಇದು ಅಕ್ಕ ಪಕ್ಕದ ಊರುಗಳಿಗೆ



ಮಾದರಿಯಾಗಿದೆ. ಮುಂದೆಯೂ ಸಹ ವದಂತಿಗಳಿಗೆ ಕಿವಿಗೊಡದೆ ಎಲ್ಲರೂ ಇದೇ ರೀತಿ ಸಂಘಟನೆಯಾಗಿ ಗ್ರಾಮದ ಅಭಿವೃದ್ಧಿಗೆ ಕೈ ಜೋಡಿಸಬೇಕೆಂದು ಮನವಿ ಮಾಡಿದರು.

ಸಾನ್ನಿಧ್ಯ ವಹಿಸಿದ್ದ ಹಾರನಹಳ್ಳಿ ಸುಕ್ಷೇತ್ರ ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರು ಮಾತನಾಡಿ, ಸಂತೋಷದ ಬದುಕಿಗೆ ಧರ್ಮಾಚರಣೆ ಮುಖ್ಯ. ಭೌತಿಕ ಬದುಕಿಗೆ ಸಂಪತ್ತಷ್ಟೇ ಮುಖ್ಯವಲ್ಲ. ಜ್ಞಾನ ದಾಸೋಹದ ಅರಿವು ಹಾಗು ಆಚರಣೆ ಅತ್ಯವಶ್ಯ. ಒಳ್ಳೆಯ ಮಾತು ಉತ್ತಮ ನಡೆನುಡಿಗಳನ್ನು ಅಳವಡಿಸಿಕೊಂಡು ಆಚರಣೆಗೆ ತಂದಾಗ ಮಾತ್ರ ಜೀವನ ಸಾರ್ಥಕವಾಗಲಿದೆಯೆಂದು ಹೇಳಿದರು.

ಜೆ.ಡಿ.ಎಸ್. ಮುಖಂಡ ಎನ್.ಆರ್. ಸಂತೋಷ್ ಅವರು ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಯುವ ಸಮುದಾಯದ ಕೊರತೆ ಎದ್ದು ಕಾಣುತ್ತಿದೆ. ಧಾರ್ಮಿಕ ಪ್ರಜ್ಞೆ ಎಲ್ಲರಲ್ಲೂ ಮೂಡಬೇಕು. ಯುವಕರು ಜ್ಞಾನ, ಕ್ರಿಯಾಶೀಲತೆ ಹಾಗು ಇಚ್ಛಾಶಕ್ತಿ ಬೆಳೆಸಿಕೊಂಡರೆ ಜೀವನದಲ್ಲಿ ಮಹತ್ತರ ಸಾಧನೆ ಮಾಡಬಹುದೆಂದು ತಿಳಿಸಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಬಿಜೆಪಿ ಮಾಜಿ ಶಾಸಕ ಕಿರಣ್ ಕುಮಾರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎಸ್.ವಿ.ಸ್ವಾಮಿ, ಉಪನ್ಯಾಸಕ ಕೆ.ಎಸ್.ಹರಶಿವಮೂರ್ತಿ, ಶಾಮಸುಂದರ್ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುಡಿಗೌಡ ಬಿ.ಸಿ.ಬಸವರಾಜ್ ವಹಿಸಿದ್ದರು. ಸಮಿತಿ ಗೌರವಾಧ್ಯಕ್ಷ ಬಸವರಾಜ್, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್.ಚಂದ್ರಶೇಖರ್, ಬಾಣಾವರ ಪಿಎಸ್‌ಐ ಸುರೇಶ್, ಗ್ರಾ.ಪಂ. ಸದಸ್ಯ ಕುಂಬಾರಘಟ್ಟ ಚನ್ನಬಸಪ್ಪ, ಮಾಜಿ ಸದಸ್ಯರಾದ ಮಹೇಶ್, ಬಿ.ಎಂ. ಮಲ್ಲಿಕಾರ್ಜುನ, ಶಿಕ್ಷಕ ಯೋಗೀಶ್ ಮತ್ತಿತರರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.


## ಶಾಸಕರ ವಿರುದ್ಧ ಸುಳ್ಳು ಆರೋಪ: ಬಿಜೆಪಿ

• ಪ್ರಜೋದಯ ವರದಿ

**ಬೇಲೂರು:** ಶಾಸಕ ಹೆಚ್.ಕೆ.ಸುರೇಶ ಅವರ ಅಭಿವೃದ್ಧಿ ಕಾರ್ಯವನ್ನು ಸಹಿಸದೆ ಹೊಟ್ಟೆಕಿಚ್ಚಿನಿಂದ ಮಾಜಿ ಸಚಿವ ಬಿ. ಶಿವರಾಂ ಅವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಸಂಜಯ್ ಕೌರಿ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾಜಿ ಸಚಿವ ಹಾಗೂ ಪರಾಜಿತ ಅಭ್ಯರ್ಥಿ ಬಿ. ಶಿವರಾಂ ಅವರು ತಾಲ್ಲೂಕಿನಲ್ಲಿ ನಡೆದ 127 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳು ನನ್ನ ಪರಿಶ್ರಮದ ಫಲವಾಗಿದ್ದು, ಇದರಲ್ಲಿ ಶಾಸಕರಿಂದ ಯಾವುದೇ ಕೊಡುಗೆ ಇಲ್ಲ ಎಂದು ಆರೋಪ ಮಾಡಿದ್ದಾರೆ . ಗ್ಯಾರಂಟಿ ಯೋಜನೆಗಳ ನಡುವೆ ಸಿಕ್ಕ ಅಲ್ಪ ಸ್ವಲ್ಪ ಅನುದಾನದಲ್ಲಿ

ಎಲ್ಲಾ ಹೋಬಳಿಗಳಲ್ಲಿ ಸಣ್ಣ ಪುಟ್ಟ



ಕಾಮಗಾರಿ ನಡೆಯುತ್ತಿದೆ. ಶಾಸಕರ ಪರಿಶ್ರಮ ಇಲ್ಲ ಎಂಬ ಹೇಳಿಕೆಯನ್ನು ನೀಡಿ ಜನತೆಯ ದಾರಿ ತಪ್ಪಿಸುತ್ತಿದ್ದಾರೆ. ಅರಸಿಕೆರೆ ಮತ್ತು ಹಾಸನ ಹಾಗೂ ಬೇಲೂರಿನಲ್ಲಿ ಸ್ಪರ್ಧಿಸಿ ಪರಾಜಿತಗೊಂಡಿದ್ದು ಸುಳ್ಳು ಮಾಹಿತಿ ನೀಡುವುದನ್ನು ಬಿಡಬೇಕು ಎಂದರು.

ಕಾಡಾನೆ ಸಮಸ್ಯೆಯಿಂದ ಬೆಳೆಹಾನಿ, ಪ್ರಾಣ ಹಾನಿಯಿಂದ ರೊಚ್ಚಿಗೆದ್ದ ಜನರು ಪ್ರತಿಭಟನೆ ನಡೆಸಿದಾಗ ಶಾಸಕರು ಪಾಲ್ಗೊಂಡಿದ್ದಾರೆ. ವಿಧಾನ ಸಭೆ ಅಧಿವೇಶನದಲ್ಲೂ ಆನೆಗಳ ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಒತ್ತಾಯಿಸಿದ್ದಾರೆ. ಆದರೆ ಬಿ ಶಿವರಾಂ ಅವರು ಒಂದೇ ಒಂದು ಪ್ರತಿಭಟನೆಯಲ್ಲಿ ಭಾಗವಹಿಸಿಲ್ಲ ಜೊತೆಗೆ ಸೌಜನ್ಯಕ್ಕೂ ಭೇಟಿ ನೀಡಿಲ್ಲ. ಇವರಿಗೆ ಶಾಸಕರ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದು ಕಿಡಿಕಾರಿದರು.

ಮಾಜಿ ತಾಪಂ ಅಧ್ಯಕ್ಷ ಪರ್ವತಯ್ಯ ಮಾತನಾಡಿ, ಶಾಸಕ ಸುರೇಶ್ ಅವರ ಮೇಲೆ ಹೊಟ್ಟೆಕಿಚ್ಚಿನ ರಾಜಕಾರಣ ಮಾಡುತ್ತಿದ್ದು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಈ ಸಂದರ್ಭದಲ್ಲಿ ಬೇಲೂರು ಅಧಿಕಾರದ ಮಾಜಿ ಅಧ್ಯಕ್ಷ ಕೋಟೆ ಶ್ರೀನಿವಾಸ್, ವಿನಯ್ ರಾಘವೇಂದ್ರ ಉಪಸ್ಥಿತರಿದ್ದರು.

## ಬಿಹಾರ: ಎನ್ ಡಿಎಗೆ ದಾಖಲೆಯ ಗೆಲುವು-ಮೋದಿ

• ಪ್ರಜೋದಯ ವರದಿ

ಪಾಟ್ನಾ: ಈ ಬಾರಿಯ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಳೆದ 20 ವರ್ಷಗಳಲ್ಲೇ ಅತ್ಯಧಿಕ ದಾಖಲೆ ಮತಗಳಿಂದ ಎನ್ ಡಿಎ ಗೆಲ್ಲಿಸಲು ಜನರು ನಿರ್ಧರಿಸಿದ್ದು, ಜಂಗಲ್ ರಾಜ್ ಜನರು ಹೀನಾಯವಾಗಿ ಸೋಲಲಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಭವಿಷ್ಯ ನುಡಿದಿದ್ದಾರೆ.

ಬಿಹಾರದ ಮಹಿಳಾ ಬಿಜೆಪಿ-ಎನ್‌ಡಿಎ ಕಾರ್ಯಕರ್ತರೊಂದಿಗೆ ನಮೋ ಆಪ್ ಮೂಲಕ ಸಂವಾದ ನಡೆಸಿದ ಪ್ರಧಾನಿ, ಬಿಹಾರದಲ್ಲಿ ಹಲವು ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ್ದೇನೆ. ಪ್ರತಿಯೊಂದು ಸಮಾವೇಶದಲ್ಲೂ ದಾಖಲೆ ಪ್ರಮಾಣದಲ್ಲಿ ಜನರು ಸೇರುತ್ತಿದ್ದು, ಹೆಚ್ಚಿನ ಸಂಖ್ಯೆಯ ಮಹಿಳೆಯರು ಬರುತ್ತಿದ್ದಾರೆ. ಬಿಹಾರ ಬಿಜೆಪಿಯ



ಮಹಿಳಾ ಕಾರ್ಯಕರ್ತರು 'ಮೇರಾ ಬೂತ್, ಸಬ್ಸೆ ಮಜ್ಬೂತ್' ಎಂಬ ಸಂಕಲ್ಪದೊಂದಿಗೆ ಅದ್ಭುತವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಸಮೀಕ್ಷೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಎನ್ ಡಿಎ ದೊಡ್ಡ ಗೆಲುವು ಸಾಧಿಸುತ್ತದೆ ಎಂದು ದೃಢಪಡಿಸಲಾಗಿದೆ. ಆದ್ದರಿಂದ ಗೆಲುವಿನ ಬಗ್ಗೆ ನನಗೆ ಯಾವುದೇ ಪ್ರಶ್ನೆಗಳಿಲ್ಲ ಆದರೆ ಹೆಚ್ಚು ಹೆಚ್ಚು ಮತದಾನ ನಡೆಯಬೇಕು ಎಂದು ಪ್ರಧಾನಿ ಹೇಳಿದರು.

ಎನ್‌ಡಿಎ ಬಗ್ಗೆ ಜನರಲ್ಲಿ ಅಪಾರ ಉತ್ಸಾಹವಿದೆ. ಅವರ ಮಾತುಗಳು ಬಡವರು, ದಲಿತರು, ಮಹಾದಲಿತರು, ಹಿಂದುಳಿದವರು ಮತ್ತು ಅತ್ಯಂತ ಹಿಂದುಳಿದವರಲ್ಲಿ ಪ್ರಚಲಿತದಲ್ಲಿರುವ ಭಾವನೆಯನ್ನು ಪ್ರತಿಧ್ವನಿಸುತ್ತವೆ ಎಂದರು.

ಕಳೆದ ಇಪ್ಪತ್ತು ವರ್ಷಗಳಲ್ಲಿಯೇ ಅತ್ಯಧಿಕ ದಾಖಲೆಯ ಪ್ರಮಾಣದಲ್ಲಿ ಎನ್‌ಡಿಎ ಗೆಲ್ಲಿಸಲು ಬಿಹಾರದ ಜನರು ಮನಸ್ಸು ಮಾಡಿದ್ದಾರೆ, ಆದರೆ 'ಜಂಗಲ್ ರಾಜ್ ಜನರು' ರಾಜ್ಯದಲ್ಲಿ ಅತ್ಯಂತ ಕೆಟ್ಟ ಸೋಲನ್ನು ಅನುಭವಿಸಲಿದ್ದಾರೆ ಎಂದು ಅವರು ಹೇಳಿದರು.

ಬಿಹಾರದಲ್ಲಿ ನವೆಂಬರ್ 6 ಮತ್ತು 11 ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ನ. 14 ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

## ಶೈಕ್ಷಣಿಕ ಸಾಲಿನ ವಿವಿಧ ಸಮಿತಿಗಳ ಉದ್ಘಾಟನೆ

• ಪ್ರಜೋದಯ ವರದಿ

**ಆಲೂರು:** ಪಟ್ಟಣದ ಸರ್ಕಾರಿ ಕಾಲೇಜಿನಲ್ಲಿ 2025-26 ನೆ ಸಾಲಿನ ಶೈಕ್ಷಣಿಕ ಸಾಲಿನ ವಿವಿಧ ಸಮಿತಿಗಳ ಉದ್ಘಾಟನಾ ಕಾರ್ಯಕ್ರಮ ನ. 5 ರಂದು ಬೆಳಗ್ಗೆ 10.30 ಕ್ಕೆ ಕಾಲೇಜು ಸಭಾಂಗಣದಲ್ಲಿ ಜರುಗಲಿದೆ

ಶಾಸಕ ಸಿಮೆಂಟ್ ಮಂಜು ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಪ್ರಾಂಶುಪಾಲ ಟಿ. ಪಿ. ಪುಟ್ಟರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತಿಯ ರೆಡ್‌ಕ್ರಾಸ್ ಸೊಸೈಟಿ ಹಾಸನ ಜಿಲ್ಲಾಧ್ಯಕ್ಷ ಹೆಚ್. ಪಿ. ಮೋಹನ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ. ಎಸ್. ಮಂಜೇಗೌಡ, ಆಂಗ್ಲಭಾಷ ವಿಭಾಗದ ಮುಖ್ಯಸ್ಥರಾದ ಕೆ. ಎನ್. ರಮೇಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಯಾವುದೇ ಕಾರ್ಯವನ್ನು ದೇವರ ಸೇವೆ ಎಂದು ಮಾಡಿದರೆ ಪುಣ್ಯದ ಕೆಲಸ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಕಬ್ಬಳಿ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ಕಾರ್ತಿಕ ಸೋಮವಾರದ ರಾತ್ರಿ ಸರ್ಪೋತ್ಸವ, ಮುತ್ತಿನ ಪಲ್ಲಕ್ಕಿ ಉತ್ಸವ ಮತ್ತು ಕಲ್ಯಾಣಿಯಲ್ಲಿ ತೆಪ್ಪೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಸಂಜೆ 6.30 ರಲ್ಲಿ ಬಸವೇಶ್ವರ ಸ್ವಾಮಿಯ ಸರ್ಪೋತ್ಸವ ಹಾಗೂ ದಸರಿಘಟ್ಟದ ಚೌಡೇಶ್ವರಿ ದೇವಿಯ, ಆದಿಚುಂಚನಗಿರಿಯ ಡಾ. ಬಾಲಗಂಗಾಧರನಾಥ ಸ್ವಾಮೀಜಿಯವರು ಪುತ್ಥಳಿ ಮತ್ತು ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರು ಮುತ್ತಿನ ಪಲ್ಲಕ್ಕಿಯ ಮೆರವಣಿಗೆಯೂ ಚಿಟ್ಟಿ ಮೇಳ, ನಾಸಿಕ್ ಡೋಲ್, ಚಂಡೆವಾದ್ಯಗಳೊಂದಿಗೆ ನಡೆಯಿತು.



ಕಲ್ಯಾಣಿಯಲ್ಲಿ ವಿದ್ಯುತ್ ದೀಪಾಲಂಕಾರದೊಂದಿಗೆ ಸಿದ್ಧಗೊಂಡಿದ್ದ ತೆಪ್ಪದಲ್ಲಿ ಬಸವೇಶ್ವರಸ್ವಾಮಿ, ಧಸರಿಘಟ್ಟದ ಚೌಡೇಶ್ವರಿ ದೇವಿಯನ್ನು ಪ್ರತಿಷ್ಠಾಪಿಸಲಾಯಿತು. ಬಾಲಗಂಗಾಧರನಾಥ ಸ್ವಾಮೀಜಿಯವರ ಪುತ್ಥಳಿ ಹಾಗೂ ನಿರ್ಮಲಾನಂದನಾಥ ಸ್ವಾಮೀಜಿಯವರು ಪುಷ್ಪ ಸಿಂಹಾಸನದ ಮೇಲೆ ಅಲಂಕೃತರಾದ ತಕ್ಷಣ ತೆಪ್ಪೋತ್ಸವಕ್ಕೆ ಚಾಲನೆ ದೊರೆಯಿತು.

ನಂತರ ನಡೆದ ಧಾರ್ಮಿಕ ಸಭೆಯಲ್ಲಿ ಹಾಸನ- ಕೊಡಗು ಮಠದ ಕಾರ್ಯದರ್ಶಿ ಶಂಭುನಾಥ ಸ್ವಾಮೀಜಿ ಮಾತನಾಡಿ, ಕೆಲಸ, ಕರ್ತವ್ಯ ಎನ್ನದೇ, ದೇವರ ಸೇವೆ ಎಂದು ಮಾಡಿದರೆ, ಅದು ಪುಣ್ಯ ಕೆಲಸವಾಗುತ್ತದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಕಬ್ಬಳಿ ದೇವಸ್ಥಾನ ಮತ್ತು ಮಠದ ಮುಂಭಾಗ ಕಾಂಕ್ರೀಟ್ ರಸ್ತೆಗೆ ಅನುದಾನ ನೀಡುವುದಾಗಿ ಹೇಳಿದರು. ಮಾಜಿ ಎಂಎಲ್‌ಸಿ ಎಂ.ಎ. ಗೋಪಾಲಸ್ವಾಮಿ ಮಾತನಾಡಿ, ಅಂಗಾಂಗ ದಾನದ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಆದಿ ಚುಂಚನಗಿರಿ ಆಸ್ಪತ್ರೆಯಲ್ಲಿ 100 ಜನರ ಹೆಸರನ್ನು ನೋಂದಣಿ ಮಾಡಿಸಿರುವುದಾಗಿ ತಿಳಿಸಿದರು.

ಚೈತನ್ಯನಾಥಸ್ವಾಮೀಜಿ, ಕಬ್ಬಳಿ ಮಠದ ಶಿವಪುತ್ರನಾಥಸ್ವಾಮೀಜಿ, ಬಸವಲಿಂಗಸ್ವಾಮೀಜಿ, ಅರಸೀಕೆರೆ ಅನಂತಕುಮಾರ್, ಮುಖ್ಯ ಶಿಕ್ಷಕ ತಿಮ್ಮೇಗೌಡ, ಗುಡಿಗೌಡ ಪ್ರಕಾಶ್ ವೇದಿಕೆಯಲ್ಲಿದ್ದರು. ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರಿಗೆ ಭಕ್ತರು ಪುಷ್ಪವೃಷ್ಟಿಯ ಮೂಲಕ ಅಭಿನಂದಿಸಿದರು. ಎಲ್ಲ ಕಾರ್ಯಕ್ರಮಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

### ಮಾಣಿಕ್ಯ ಪ್ರಕಾಶನ ಸತ್ವಯುತ ಸಾಹಿತ್ಯ ಗುರುತಿಸುತ್ತಿದೆ: ಸಾಹಿತಿ ಡಾ. ಬಾ. ನಂ. ಲೋಕೇಶ್

## ಮನಸ್ಸಿಗೆ ಆನಂದ ಕೊಡುವ ಅನುಭವವೇ ರಸಸ್ಥಾಯಿ ಕಾವ್ಯ

• ಪ್ರಜೋದಯ ವರದಿ

**ಹಾಸನ:** ಲೋಕಾನುಭವದಿಂದ ಸೃಜಿಸಿದ ಸಾಹಿತ್ಯ ನಿಜ ಸಾಹಿತ್ಯವಾಗುತ್ತದೆ. ಮಾಣಿಕ್ಯ ಪ್ರಕಾಶನ ಸತ್ವಯುತ ಸಾಹಿತ್ಯ ಗುರುತಿಸುತ್ತಿದೆ. ಮನಸ್ಸಿಗೆ ಆನಂದ ಕೊಡುವ ಅನುಭವವೇ ರಸಸ್ಥಾಯಿಭಾವವಾಗಿ ಕಾವ್ಯವಾಗುತ್ತದೆ ಎಂದು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಬಾ.ನಂ. ಲೋಕೇಶ ಅಭಿಪ್ರಾಯಪಟ್ಟರು.

ನಗರದ ಸಂಸ್ಕೃತ ಭವನದಲ್ಲಿ ಏರ್ಪಡಿಸಿದ್ದ ಮಾಣಿಕ್ಯ ಪ್ರಕಾಶನದ ದಶಮಾನೋತ್ಸವ ಹಾಗೂ ಜನ್ನಕಾವ್ಯ ಹಾಗೂ ಹೊಯ್ಸಳ ಸಾಹಿತ್ಯ ರಾಜ್ಯ ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ ಹಾಗೂ ಅಂತರಾಜ್ಯಮಟ್ಟದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಒಬ್ಬ ಕವಿಯಾದವನಿಗೆ ರಸಕಲ್ಪನೆ ಇರಬೇಕು. ಜಾಗತಿಕ ಕಾವ್ಯ ರಚನೆಕಾರರಲ್ಲಿ ಸ್ವಾನುಭವದ ಪರಿಕಲ್ಪನೆ ಇದ್ದರೆ ಸಮಾಜಕ್ಕೆ ಪೂರಕವಾದ ಗಟ್ಟಿ ಸಾಹಿತ್ಯ ರಚನೆ ಮಾಡಬಹುದು. ಹೀಗೆ ರಚನೆಯಾದ ಸಾಹಿತ್ಯ ಕವಿಯ ಮನೋಬಲವನ್ನು ಹೆಚ್ಚಿಸುತ್ತದೆ ಎಂದರು.

ನಾಡಿನ ಪ್ರತಿಷ್ಠಿತ ಪ್ರಕಾಶನಗಳಲ್ಲಿ ಒಂದಾದ ಮಾಣಿಕ್ಯ ಪ್ರಕಾಶನ ಹಲವಾರು ಒಳ್ಳೆಯ ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಕೊಡುವುದರೊಂದಿಗೆ ಕವಿಗಳ, ಸಾಹಿತಿಗಳ ಮಾರ್ಗದರ್ಶಕವಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ದಶಮಾನೋತ್ಸವದ ಸಂಭ್ರಮದಲ್ಲಿದೆ. ಯಾವುದೇ ರಾಜಿ ಇಲ್ಲದೆ ಒಳ್ಳೆಯ ಸಾಹಿತ್ಯ ಕೃತಿ ರಚನಕಾರರನ್ನು ಗುರುತಿಸಿ ಸನ್ಮಾನಿಸುವುದರೊಂದಿಗೆ ಅವರ ಕೃತಿಗಳನ್ನು ಹೊರ ತರುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ಪ್ರಕಾಶಕರಾದ ದೀಪ ಉಪ್ಪಾರ್ ರವರ ಪ್ರಕಾಶನದಲ್ಲಿ ಸಹಸ್ರಾರು ಕೃತಿಗಳು ಹೊರಬರಬೇಕೆಂಬುದೇ ನಮ್ಮ ಆಶಯವೆಂದು ಹೇಳಿದರು.

ಸಾಹಿತಿ ಡಾ. ಎಚ್.ಕೆ.ಹಸೀನಾ



ರಾಜ್ಯಮಟ್ಟದ ಹೊಯ್ಸಳ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಪ್ರಶಸ್ತಿಗಳು ಆಯಾ ಕ್ಷೇತ್ರದ ಜವಾಬ್ದಾರಿಯನ್ನು ಹೆಚ್ಚಿಸುವುದರ ಜೊತೆಗೆ ಸದಾ ಕ್ರಿಯಾಶೀಲವಾಗಿರಲು ಉತ್ತೇಜಿಸುತ್ತವೆ. ಈ ನಿಟ್ಟಿನಲ್ಲಿ ಮಾಣಿಕ್ಯ ಪ್ರಕಾಶನ ಎಲೆಮರೆಕಾಯಿಯಂತಹ ಸಾಧಕರನ್ನು ಗುರುತಿಸಿ ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಹಿರಿಯ ಸಾಹಿತಿ ಗೊರೂರು ಅನಂತರಾಜುರವರು ಸಾಹಿತಿ ಎಚ್. ಎಸ್.ಬಸವರಾಜುರವರ ಬಿಡಿ ಲೇಖನಗಳ ಸಂಗ್ರಹ 'ಗುಚ್ಛ' ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿ, ಬಸವರಾಜುರವರು ಸಮಕಾಲೀನ ತಲ್ಲಣಗಳ ಮೇಲೆ ತಮ್ಮ ಬರಹಗಳಲ್ಲಿ ಬೆಳಕು ಚೆಲ್ಲಿದ್ದಾರೆ. ವೈಚಾರಿಕ ದೃಷ್ಟಿಯ ಬರಹ ಓದುಗರ ಮನಸೆಳೆಯುತ್ತದೆ. ಇವರ ಮೇಲೆ ಕುವೆಂಪು, ಬೇಂದ್ರೆಯವರ ದಟ್ಟ ಛಾಯೆ ಬಿದ್ದಿರುವುದು ಈ ಕೃತಿ ಓದಿದವರಿಗೆ ಅನುಭವವಾಗುತ್ತದೆ. ಇದೊಂದು ಅತ್ಯುತ್ತಮ ಮಾಹಿತಿ ಕಣಜವಾಗಿದೆ ಎಂದರು.

ಸಾಹಿತಿ ಬಿ.ಎಂ. ಭಾರತಿ ಹಾದಿಕೆ ಯುವ ಸಾಹಿತಿ ವಾಸು ಸಮುದ್ರವಳ್ಳಿಯವರ 'ಒಳಗಣ್ಣು' ಬಿಡಿ ವಿಮರ್ಶಾ ಲೇಖನಗಳ ಸಂಗ್ರಹ ಲೋಕಾರ್ಪಣೆ ಮಾಡಿ ಮಾತನಾಡಿ ಹಲವಾರು ಹಿರಿಯ ಸಾಹಿತಿಗಳ ಕೃತಿಗಳನ್ನು ವಾಸುರವರು ವಿಶ್ಲೇಷಣೆ ಮಾಡಿ ಮೂಲ ಕೃತಿಗಳನ್ನು ಓದುವ ಆಸಕ್ತಿಯನ್ನು ಮೂಡಿಸಿದ್ದಾರೆ. ಹೊತ್ತಿಗೆ ಕಿರಿದಾದರೂ ಹಿರಿದಾದ ಸಾಹಿತ್ಯದ ಹೂರಣವನ್ನು 'ಒಳಗಣ್ಣು' ಕೃತಿ ಗರ್ಭೀಕರಿಸಿಕೊಂಡಿದೆ. ಪ್ರತಿಯೊಬ್ಬರು ಈ ಕೃತಿಯನ್ನು ಓದಿದಾಗ ಒಂದು ಕೃತಿಯ ಸ್ಥೂಲ ಪರಿಚಯವನ್ನು ನಿರ್ದಿಷ್ಟ ಚೌಕಟ್ಟಿನಲ್ಲಿ ಹೇಗೆ ಮಾಡಬಹುದೆಂಬ ಕೌಶಲ ದೊರೆಯುತ್ತದೆ ಎಂದು ಅಭಿಪ್ರಾಯಿಸಿದರು.

ಕೊಪ್ಪಳದ ಶರಣಪ್ಪ ತಳ್ಳಿ ಕುಪ್ಪಿಗುಡ್ಡ, ಅಶ್ವತ್ಥಪ್ಪ ಕರ್ನೂಲು, ಡಾ. ಪಾರ್ವತಿದೇವಿ ಪಾಟೀಲ, ದೀಪಾಲಿ ದೀಪಕ ಸಾಮಂತ್, ವೈ.ಬಿ.ಕಾಂತರಾಜ್ ಇನ್ನಿತರರು ಹಾಜರಿದ್ದರು.

## ರಾಜ್ಯ ಸರ್ಕಾರದಿಂದ ಒಲಿಂಪಿಕ್ ಪದಕ ಯೋಜನೆ ಜಾರಿ

### ಪ್ರತಿ ಕ್ರೀಡಾಪಟುವಿಗೆ 3 ವರ್ಷಗಳವರೆಗೆ 10 ಲಕ್ಷ ರೂ. ಸಹಾಯಧನ

• ಪ್ರಜೋದಯ ವರದಿ

**ಬೆಂಗಳೂರು:** ಲಾಸ್ ಏಂಜಲೀಸ್ 2028 (2028) ಅನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಒಲಿಂಪಿಕ್ ಪದಕ ಯೋಜನೆಯನ್ನು ಪ್ರಾರಂಭಿಸಿದೆ.

ಈ ಯೋಜನೆಯಡಿ 60 ಕ್ರೀಡಾಪಟುಗಳನ್ನು ಗುರುತಿಸಲಾಗುತ್ತಿದ್ದು, ಪ್ರತೀ ಕ್ರೀಡಾಪಟುವಿಗೆ ಮೂರು ವರ್ಷಗಳವರೆಗೆ ಪ್ರತಿ ವರ್ಷ 10 ಲಕ್ಷ ರೂ. ಸಹಾಯಧನ ನೀಡಲಾಗುತ್ತದೆ. ಇದಕ್ಕಾಗಿ ರಾಜ್ಯ ಸರ್ಕಾರ 6 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ಹೊಸ ಮಾರ್ಗಸೂಚಿಗಳ ಪ್ರಕಾರ, ಕ್ರೀಡಾಪಟುಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ಕ್ರೀಡಾ ಮತ್ತು ಯುವಜನ ಸೇವೆಗಳ ಇಲಾಖೆಯು ಮುಂದಿನ ವಾರ ಅರ್ಜಿಗಳನ್ನು ಆಹ್ವಾನಿಸಲಿದೆ ಎಂದು ತಿಳಿದುಬಂದಿದೆ.

ಇಲಾಖೆಯು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಆಯ್ಕೆ ಮಾಡುತ್ತದೆ. ವಿಶ್ವ ಅಥವಾ ಏಷ್ಯನ್ ಚಾಂಪಿಯನ್‌ಶಿಪ್‌ಗಳು, ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಭಾಗವಹಿಸಿದವರು ಅರ್ಜಿ ಸಲ್ಲಿಸಬಹುದು. ಸೀನಿಯರ್ ಮತ್ತು ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗಳಲ್ಲಿ ಪದಕಗಳನ್ನು ಗೆದ್ದವರು ಸಹ ಅರ್ಜಿ ಸಲ್ಲಿಸಬಹುದು.

ಗುಂಪು ಆಟದ ವಿಭಾಗದ ಅಡಿಯಲ್ಲಿ, ರಾಷ್ಟ್ರೀಯ ಶಿಬಿರಗಳಲ್ಲಿ ಭಾಗವಹಿಸಿದ ಅಥವಾ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸತತ ಮೂರು ವರ್ಷಗಳ ಕಾಲ ಕರ್ನಾಟಕವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಇಲಾಖೆ ಸಮಿತಿಗಳನ್ನು ರಚಿಸಿದೆ ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಮಾರ್ಗಸೂಚಿಗಳನ್ನು ರೂಪಿಸಲಾಗಿದ್ದು, ಅರ್ಹ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಕ್ರೀಡಾಪಟುಗಳ ಕಾರ್ಯಕ್ಷಮತೆಯ ಆಧಾರದ ಮೇಲೆ, ಎರಡನೇ ಮತ್ತು ಮೂರನೇ ವರ್ಷಕ್ಕೆ ಅವರಿಗೆ ಹಣಕಾಸಿನ ನೆರವು ನೀಡಲಾಗುತ್ತದೆ. ಈ ಹಣವನ್ನು ತರಬೇತಿ, ಉಪಕರಣಗಳು ಮತ್ತು ಪೌಷ್ಠಿಕಾಂಶ ಪೂರಕಗಳನ್ನು ಖರೀದಿಸಲು ಮತ್ತು ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಬಳಸಬಹುದಾಗಿದೆ ಎಂದು ತಿಳಿಸಲಾಗಿದೆ.

# ನ.9ರಂದು ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನೆ

## 4ನೇ ಬೆಟ್ಟದ ಪದನಾಮ ಅನಾವರಣ | ಉಪರಾಷ್ಟ್ರಪತಿ, ರಾಜ್ಯಪಾಲರ ಆಗಮನ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಪ್ರಥಮಾಚಾರ್ಯ ಚಾರಿತ್ರ ಚಕ್ರವರ್ತಿ ಶ್ರೀ 108ನೇ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನಾ ಮಹೋತ್ಸವ ಮತ್ತು ಶ್ರವಣಬೆಳಗೊಳ ಕ್ಷೇತ್ರದ 4ನೇ ಬೆಟ್ಟದ ಪದನಾಮ ಅನಾವರಣ ಕಾರ್ಯಕ್ರಮ ನ.9 ರಂದು ಜರುಗಲಿದೆ ಎಂದು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾ ಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರು ತಿಳಿಸಿದರು.

ಮಂಗಳವಾರ ಮಠದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭಾಗಿ ಯಾಗಿ ವಿವಿಧ ಕಾರ್ಯಕ್ರಮ ಉದ್ಘಾಟಿಸುವರು. ಅವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಚಿವ ಡಿ.ಸುಧಾಕರ್, ಸಂಸದ ಶ್ರೇಯಸ್ ಪಟೇಲ್ ಭಾಗಿಯಾಗುವರು. ಶಾಸಕ ಸಿ.ಎನ್.ಬಾಲಕೃಷ್ಣ ಅವರು ಅಧ್ಯಕ್ಷತೆ ವಹಿಸುವರು. ಶಾಸಕರಾದ ಅಭಯ್ ಪಾಟೀಲ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ರಾಜ್ಯಸಭಾ ಸದಸ್ಯ ನವೀನ್ ಜೈನ್ ಹಾಗು ಮಹಾರಾಷ್ಟ್ರದ ಶಾಸಕರೂ ಭಾಗಿಯಾಗುವರು ಎಂದರು.

ಅಂದು ಬೆಳಿಗ್ಗೆ 10.30 ಗಂಟೆಗೆ ಕ್ಷೇತ್ರದ ಗೊಮ್ಮಟನಗರದ ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮ



ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ 4ನೇ ಬೆಟ್ಟದ ಮೇಲೆ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನಾ ಚರಣ ಪಾದುಕೆ ಸ್ಥಾಪನೆ ಹಾಗು ಬೆಟ್ಟಕ್ಕೆ ಪದನಾಮ ಅನಾವರಣ ಮತ್ತು ಶಾಂತಿಸಾಗರ ಮಹಾರಾಜರ ಜೀವನ ಚರಿತ್ರೆಯ ಬೃಹತ್ ಶೀಲಾಶಾಸನ ಲೋಕಾರ್ಪಣೆ ಆಗಲಿದೆ.

ಮಧ್ಯಾಹ್ನ 3.30 ಗಂಟೆಗೆ ಮಠದ ಮುಂಭಾಗದಿಂದ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆಯೊಂದಿಗೆ ವಿವಿಧ ಮಂಗಳ ವಾದ್ಯ, ಧರ್ಮಧ್ವಜ, ಮಂಗಳ ಕಳಶಗಳೊಂದಿಗೆ ಬೃಹತ್ ಮೆರವಣಿಗೆ ಹಾಗು ಸಂಜೆ 6 ಗಂಟೆಗೆ ಮೆರವಣಿಗೆಯಲ್ಲಿ ಸಾಗಿ ನೂತನವಾಗಿ ಸ್ಥಾಪಿತಗೊಂಡಿರುವ ಪ್ರತಿಮೆಯ ಎದುರು ಆರತಿ ಕಾರ್ಯಕ್ರಮ ಇರಲಿದೆ ಎಂದು ವಿವರಿಸಿದರು.

ಶಾಂತಿಸಾಗರ ಮಹಾರಾಜರು ಶ್ರವಣಬೆಳಗೊಳಕ್ಕೆ ಬಂದು 100 ವರ್ಷ ತುಂಬಿದ ಹಿನ್ನಲೆ ತಲಾ 7 ಇಂಚು ಉದ್ದದ ಹಿತ್ತಾಳೆಯ 100 ಪ್ರತಿಮೆ ನಿರ್ಮಿಸಿ ಕರ್ನಾಟಕದ ಎಲ್ಲಾ ಜಿನ ಮಂದಿ ರಗಳಲ್ಲಿ ಇಡಲು ನಿರ್ಧರಿಸಲಾಗಿದೆ.

### ಶಾಂತಿಸಾಗರ ಮಹಾರಾಜರ ಇತಿಹಾಸ

ಶಾಂತಿಸಾಗರ ಮಹಾರಾಜರು, ಉತ್ತರ ಕರ್ನಾಟಕದ ಭೋಜ ಗ್ರಾಮದಲ್ಲಿ ಸಾತನೌಡರಾಗಿ 1872 ರಲ್ಲಿ ಜನಿಸಿ, ಧರ್ಮ ಚಿಂತನೆ, ರತ್ನತ್ರಯ, ಧರ್ಮ ಪಾಲನೆ, ನಿರತಿಚಾರ ಪೂರ್ವಕವಾಗಿ ಪಾಲಿಸುತ್ತಾ ದೇವಶಾಸ್ತ್ರ ಗುರುಗಳಲ್ಲಿ ಅನುರಕ್ತಿ, ಪ್ರಾಣಿ-ಪಕ್ಷಿಗಳ ಮೇಲಿನ ದಯೆ, ಕಿರಿಯರ ಮೇಲೆ ವಾತ್ಸಲ್ಯ, ಗುರುಗಳಲ್ಲಿ ಅಪಾರ ಭಕ್ತಿ ಹೊಂದಿದ್ದರು. 1912 ರಲ್ಲಿ ಶ್ರವಣಬೆಳಗೊಳಕ್ಕೆ ಆಗಮಿಸಿ ಬಾಹುಬಲಿ ದರ್ಶನ ಪಡೆದು ದಿಗಂಬರ ಮುನಿ ಪರಂಪರೆ ಅರಿತರು. 1915ರಲ್ಲಿ ಸನ್ಯಾಸಪರೀಕ್ಷೆ ಪಡೆದುಕೊಂಡರು. ನಿಸ್ಪಹ ವ್ಯಕ್ತಿತ್ವ, ಮೃದುತ್ವ, ಸರಳತೆ, ಗಂಭೀರ ಸ್ವರೂಪದ ಆಚಾರ್ಯ ಶ್ರೀಗಳವರು, ವೈರಾಗ್ಯದಿಂದ ದೇವೇಂದ್ರ ಕೀರ್ತಿ ಸ್ವಾಮೀಜಿ ಅವರಿಂದ ಕ್ಷುಲ್ಲಕ ದೀಕ್ಷೆ ಪಡೆದು ನಂತರ ಫಾಲ್ಗುಣ ಶುಕ್ಲ ಚತುದರ್ಶಿ 1920 ರಲ್ಲಿ ಸ್ವಯಂ ಮುನಿದೀಕ್ಷೆ ಪಡೆದರು ಎಂದು ವಿವರಿಸಿದರು.

ಹಾಗೆಯೇ ಮಹಾರಾಜರ ಸಂಪೂರ್ಣ ಜೀವನ ಚರಿತ್ರೆ ಸಾವಿರು ಶಿಲಾಶಾಸನ ಸಹ ಕೆತ್ತಿಸಲಾಗಿದೆ. ಶ್ರೀಕ್ಷೇತ್ರದಲ್ಲಿ ಈಗಾಗಲೇ ವಿಂಧ್ಯಗಿರಿ, ಚಂದ್ರಗಿರಿ ಜೊತೆಗೆ ಇತ್ತೀಚೆಗೆ ಚಾರುಗಿರಿ ಬೆಟ್ಟ ಸೇರ್ಪಡೆಯಾಗಿದೆ. ಇದೀಗ 4ನೇ ಬೆಟ್ಟದ ಉದ್ಘಾಟನೆ ನಡೆಯುತ್ತಿದೆ ಎಂದು ಹೇಳಿದರು.

> ಹಿರಿಯ ಸ್ವಾಮೀಜಿ ಅವರ ಸಂಕಲ್ಪದಂತೆ ಕಿರಿಯ ಶ್ರೀಗಳು ಶೈಕ್ಷಣಿಕ, ಆಧ್ಯಾತ್ಮಿಕ ಹಾಗು ಅಭಿವೃದ್ಧಿ ಕಾರ್ಯ ಮುಂದುವರಿಸಿದ್ದಾರೆ. ಇದಕ್ಕಾಗಿ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದೇವೆ.
> – ಸಿ.ಎನ್.ಬಾಲಕೃಷ್ಣ, ಶಾಸಕ

ದೇಶ ವಿಹಾರ ಮಾಡಿ ದೆಹಲಿಯಲ್ಲಿ ನಿರಂತರ ಪ್ರತಿಭಟನೆ ನಡೆಸಿ ದಿಗಂಬರ ಮುನಿಗಳು ಎಲ್ಲೆಡೆ ವಿಹಾರ ಮಾಡಲು ಅಂದಿನ ಬ್ರಿಟೀಷ್ ಸರ್ಕಾರದ ಅನುಮತಿ ಕೊಡಿಸುವಲ್ಲಿ ಶಾಂತಿಸಾಗರ ಮಹಾರಾಜರು ಶ್ರೀಗಳ ಪಾತ್ರ ದೊಡ್ಡದು. ಈ ಮೂಲಕ ದೇಶದಲ್ಲಿ ಶ್ರಮಣ ಮುನಿ ಪರಂಪರೆ ನಶಿಸುತ್ತಾ ಬರುವಾಗ ಚಾರಿತ್ರ ಸೂರ್ಯನ ಉದಯವಾದಂತೆ ಬಂದ ಮಹಾರಾಜರು, 9338ಕ್ಕೂ ಅಧಿಕ ಉಪವಾಸ ಆಚರಿಸಿ ಮಹಾತಪತ್ವಿಗಳಾಗಿದ್ದಾರೆ. ಜೈನ ಧರ್ಮಕ್ಕೆ, ಶ್ರೀಕ್ಷೇತ್ರಕ್ಕೆ ಸಾಕಷ್ಟು ಇವರ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

1925ರಲ್ಲಿ ಮತ್ತೊಮ್ಮೆ ಶ್ರವಣಬೆಳಗೊಳಕ್ಕೆ ಆಗಮಿಸಿ ಮಹಾ ಮಸ್ತಕಾಭಿಷೇಕ ಸಾನಿಧ್ಯ ಪಧಾನ ಮಾಡಿದ್ದರು. ಇಂತಹ ಶ್ರೀಗಳು ಬೆಳಗೊಳಕ್ಕೆ ಬಂದು 100 ವಸಂತಗಳ ಪುಣ್ಯಸ್ಮತಿ ಶತಮಾನೋತ್ಸವದ ಸವಿ ನೆನಪಿನಲ್ಲಿ ಅವರ ಕೀರ್ತಿ ಶ್ರವಣ ಬೆಳಗೊಳದಲ್ಲಿ ಶಾಶ್ವತವಾಗಿರಲೆಂದು ವಿಂಧ್ಯಗಿರಿ ಪಕ್ಕದಲ್ಲಿರುವ ಮತ್ತೊಂದು ಖಾಲಿ ಬೆಟ್ಟದಲ್ಲಿ ಹತ್ತೂವರೆ ಅಡಿ ಉತ್ತದ ಮಹಾರಾಜರ ಮೂರುತಿಯ ಪ್ರತಿಷ್ಠಾಪನೆ ಮಾಡಲಾಗುತ್ತಿದೆ ಎಂದರು.

## ಉಪ ರಾಷ್ಟ್ರಪತಿ ಕಾರ್ಯಕ್ರಮದಲ್ಲಿ ಲೋಪಕ್ಕೆ ಅವಕಾಶ ನೀಡದಿರಿ

» ಮೊದಲನೇ ಪುಟದಿಂದ

ದಲ್ಲಿಟ್ಟುಕೊಂಡು ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಶ್ರವಣಬೆಳಗೊಳಕ್ಕೆ ಹೆಚ್ಚಿನ ಸಂಖ್ಯೆ ಗಣ್ಯರು ಆಗಮಿಸುವುದರಿಂದ ಹೆಲಿಪ್ಯಾಡ್‌ಗೆ ಶಾಶ್ವತವಾಗಿ ಒಂದು ನಿಗದಿತ ಸ್ಥಳ ಗುರುತಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿ ಮಂಜುನಾಥ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾ ಣಾಧಿಕಾರಿ ಡಾ.ಅನಿಲ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನೀಯರ್ ರಾಜು, ಸಹಾಯಕ ಕಾರ್ಯಪಾಲಕ ಇಂಜಿನೀಯರ್ ರುಕ್ಮಿಣಿ, ತಹಶೀಲ್ದಾರ್ ಶಂಕರ್, ಅರಸೀಕೆರೆ ತಾಲ್ಲೂಕು ತಹಶೀಲ್ದಾರ್ ಸಂತೋಷ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

**ಸ್ಥಳ ಪರಿಶೀಲನೆ, ಸ್ವಾಮೀಜಿಯೊಂದಿಗೆ ಚರ್ಚೆ**

ಸಭೆಗೂ ಮುನ್ನ ಜಿಲ್ಲಾಧಿಕಾರಿ ಕಾರ್ಯಕ್ರಮ ನಡೆಯುವ ಸ್ಥಳ ಹಾಗು ಹೆಲಿಪ್ಯಾಡ್‌ಗೆ ಭೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು.

ಶಾಸಕ ಸಿ.ಎನ್.ಬಾಲಕೃಷ್ಣ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು. ನಂತರ ಮಠಕ್ಕೆ ಆಗಮಿಸಿ ಶ್ರೀ ಚಾರುಕೀರ್ತಿ ಪಂಡಿತಾ ಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಕಾರ್ಯಕ್ರಮ ಕುರಿತು ಚರ್ಚಿಸಿದರು.

ಈ ವೇಳೆ ಮಾತನಾಡಿದ ಸ್ವಾಮೀಜಿ ಅವರು, ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಪ್ರತಿಮೆ ಪ್ರತಿಷ್ಠಾಪನೆ, ಚರಣ ಪಾದುಕೆ ಸ್ಥಾಪನೆ ಹಾಗು ಬೆಟ್ಟಕ್ಕೆ ಪದನಾಮ ಅನಾವರಣ ಮತ್ತು ಶಾಂತಿ ಸಾಗರ ಮಹಾರಾಜರ ಜೀವನ ಚರಿತ್ರೆಯರ ಬೃಹತ್ ಶಿಲಾ ಶಾಸನ ಲೋಕಾರ್ಪಾಣೆ ಆಗಲಿದೆ. ಶ್ರವಣಬೆಳಗೊಳಕ್ಕೆ ಶಾಂತಿ ಸಾಗರ ಮಹಾರಾಜರು ಬಂದು 100 ವರ್ಷ ತುಂಬಿದ ಹಿನ್ನಲೆ ಸ್ವಾಮೀಜಿ ಅವರ ನೆನಪಿಗಾಗಿ ಬೆಟ್ಟಕ್ಕೆ ಹೆಸರಿಡುವ ಕೆಲಸ ಮಾಡಲಾಗುತ್ತಿದೆ. ಶ್ರವಣಬೆಳಗೊಳದಲ್ಲಿ ಶಾಶ್ವತವಾಗಿ ಒಂದು ಹೆಲಿಪ್ಯಾಡ್ ನಿರ್ಮಾಣ ಆಗಬೇಕು. ಇಲ್ಲಿಗೆ ತುಂಬಾ ಅಗತ್ಯವಿದೆಂದರು.

## ಕಾನೂನು ತಿಳಿದುಕೊಂಡು ಶಕ್ತಿಯುತವಾಗಿ ಹೋರಾಡಿ

• ಮೊದಲನೇ ಪುಟದಿಂದ

ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯ ಸಮಿತಿಯಲ್ಲಿರುವಂತಹ ಸದಸ್ಯರು ಬಹಳ ಸಮಸ್ಯೆಗಳನ್ನು ಎದುರಿಸಿ ಬಂದವರಾಗಿದ್ದೀರಿ. ನಿಮ್ಮ ರೀತಿ ಅನೇಕ ಮಹಿಳೆಯರು ತೊಂದರೆಗಳನ್ನು ಅನುಭವಿಸುತ್ತಿರುವವರಿದ್ದಾರೆ. ಅವರಿಗೆ ನೀವು ಸಹಾಯಕರಾಗಿ ಇರಬೇಕು, ಅದಕ್ಕಾಗಿ ಮೊದಲು ನೀವು ಮಾಹಿತಿಗಳನ್ನು ತಿಳಿದುಕೊಂಡಿರಬೇಕು. ಹಾಗಾಗಿ ಈ ಕಾರ್ಯಾಗಾರದ ಮಾಹಿತಿಗಳು ನಿಮಗೆ ಉಪಯೋಗಕರವಾಗಲಿದ್ದು, ಎಲ್ಲರೂಕಾರ್ಯಕ್ರಮದ ಸದಪಯೋಗ ಪಡೆದುಕೊಳ್ಳಿ ಎಂದರು.

ಸಾಹಿತಿ ರೂಪ ಹಾಸನ ಅವರು ಮಾತನಾಡಿ, ಈ ಹಿಂದೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಕಾರ್ಯಾಗಾರ ಮಾಡಲಾಗಿತ್ತು. ಸರ್ಕಾರಿ ಅಧಿಕಾರಿಗಳು, ನೌಕರರಿಗೆ ಈ ಕಾಯ್ದೆಯ ಕುರಿತು ಮಾಹಿತಿ ಗೊತ್ತಿಲ್ಲದಿರುವ ಸ್ಥಿತಿ ನಿರ್ಮಾಣವಾಗಿದೆ. ಖಾಸಗಿ ಸಂಸ್ಥೆಗಳಲ್ಲಿ ಇಂದಿಗೂ ಕೂಡ ಕಾರ್ಯಾಗಾರ ನಡೆಸಲಾಗುತ್ತಿದೆ. ಎಲ್ಲರೂ ಈ ಕಾಯ್ದೆಯ ಕುರಿತು ತಿಳಿದುಕೊಳ್ಳುವುದರ ಮೂಲಕ ದಿಟ್ಟತನದಿಂದ ದೌರ್ಜನ್ಯಗಳನ್ನು ಎದುರಿ ಸುವಂತ ಗಾಲಿ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮಂಜುನಾಥ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಧರಣಿ ಕುಮಾರ್ ಮತ್ತಿತರ ಅಧಿಕಾರಿಗಳು ಹಾಜರಿ ದ್ದರು.

**ಹಾಸ್ಟೆಲ್‌ಗೆ ಭೇಟಿ, ಸಮಸ್ಯೆ ಆಲಿಕೆ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ ಡಾ.ನಾಗಲಕ್ಷ್ಮೀ ಚೌದರಿ ಅವರು ಭೇಟಿ ಮಾಡಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಆಲಿಸಿದರು.

ವಿದ್ಯಾರ್ಥಿ ನಿಲಯದಲ್ಲಿ 140 ರಿಂದ 200 ಜನ ವಿದ್ಯಾರ್ಥಿನಿಯರಿದ್ದು, ವಿದ್ಯಾರ್ಥಿ ನಿಲಯದ ಕಟ್ಟಡ ಶೀತಗೊಂಡಿದೆ. ಆಹಾರ ಸರಿ ಇಲ್ಲ, ಶೌಚಾಲಯದ ಅವ್ಯವಸ್ಥೆ, ಸ್ವಚ್ಚತೆ ಇಲ್ಲ, 4-5 ತಿಂಗಳಿನಿಂದ ಕಿಟ್‌ಗಳನ್ನು ನೀಡಿಲ್ಲ, ಸಿಸಿಟಿವಿ ಕ್ಯಾಮರಾಗಳ ಕೊರತೆ ಇದ್ದು, ಹೆಚ್ಚು ವಿದ್ಯಾರ್ಥಿಗಳು ಒಂದೇ ರೂಮ್‌ನಲ್ಲಿ ಇರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆಗಮನ ಸೆಳೆಯಲಾಯಿತು.

## ಪ್ರತ್ಯೇಕ ಪ್ರಕರಣ: ನಗದು ಸೇರಿ 7 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ನಗರದ ವಿವಿಧೆಡೆ ಮನೆಗಳವು ಪ್ರಕರಣ ನಡೆದಿದ್ದು ನಗದು ಸೇರಿ 7.74 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು ಮಾಡಲಾಗಿದೆ.

ಗುಡ್ಡೇನಹಳ್ಳಿಯ ಕಾಂತಮಣಿ ಎಂಬುವವರ ಮನೆಗೆ ಸೋಮವಾರ ನುಗ್ಗಿರುವ ಕಳ್ಳರು 3 ಲಕ್ಷ ರೂ. ಬೆಲೆಯ ಚಿನ್ನಾಭರಣ ಹಾಗು 1 ಲಕ್ಷ ರೂ. ನಗದು ಕಳವು ಮಾಡಿದ್ದಾರೆ.

ಸಂಜೆ 6ರ ಸಮಯದಲ್ಲಿ ಬಾಗಿಲು ಲಾಕ್ ಮಾಡಿ ವಾಕಿಂಗ್‌ಗೆಂದು ಬೀಗದ ಕಿಯನ್ನು ಮೀಟರ್ ಬೋರ್ಡ್‌ನಲ್ಲಿಟ್ಟು ತೆರಳಿದ್ದರು. ಒಂದು ಗಂಟೆ ಬಳಿಕ ವಾಪಾಸ್ ಬಂದಾಗ ಮನೆ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿಟ್ಟಿದ್ದ 30 ಗ್ರಾಂ ತೂಕದ ಚಿನ್ನದ ಸರ ಹಾಗು ಹಣ ದೋಚಿದ್ದಾರೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವು ದನ್ನು ಖಚಿತಪಡಿಸಿಕೊಂಡು ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 50 ಸಾವಿರ ರೂ. ನಗದು ಹಾಗು 2.24 ಲಕ್ಷ ರೂ. ಬೆಲೆಯ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಚಿಕ್ಕೋನಹಳ್ಳಿ ಗ್ರಾಮದಲ್ಲಿ ನಡೆದಿದೆ.

ನಿವಾಸಿ ಅನು ಎಂಬುವವರು ಅ.25 ರಂದು ಕುಟುಂಬ ಸಮೇತ ಮೈಸೂರಿಗೆ ತೆರಳಿದ್ದರು. ಅ.27 ರಂದು ವಾಪಾಸ್ ಬಂದಾಗ ಕಳ್ಳತನ ವಿಷಯ ತಿಳಿದಿದೆ. ಬಲವಾದ ಆಯುಧದಿಂದ ಬಾಗಿಲು ಮೀಟಿ ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 230 ಗ್ರಾಂ ತೂಕದ ಬೆಳ್ಳಿ ಲಕ್ಷ್ಮಿ ಮುಖವಾಡ, 132 ಗ್ರಾಂ ತೂಕದ ಬೆಳ್ಳಿ ದೀಪದ ಕಂಬ, 75 ಗ್ರಾಂ ತೂಕದ ಬೆಳ್ಳಿ ಕೈ ಬಳೆಗಳು, 40 ಗ್ರಾಂ ತೂಕದ 1 ಜೊತೆ ಬೆಳ್ಳಿಯ ಸೊಂಟದ ದಾರ, 26 ಗ್ರಾಂ ತೂಕದ ಬೆಳ್ಳಿಯ ಕುಂಕುಮದ ಬಟ್ಟಲು, 60 ಗ್ರಾಂ ತೂಕದ ಬೆಳ್ಳಿ ದೀಪ, 45 ಗ್ರಾಂ ತೂಕದ ಬೆಳ್ಳಿ ಕಾಲು ಬಳೆ, 3 ಗ್ರಾಂ ತೂಕದ 1 ಚಿನ್ನದ ಉಂಗುರ, 10 ಗ್ರಾಂ ತೂಕದ ಡೈಮಂಡ್ ಹರಳಿರುವ ಬೆಳ್ಳಿ ಉಂಗುರ, 2 ರೇಷ್ಮೆ ಸೀರೆ ಕದ್ದಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆ ಬೀಗ ಮುರಿದು 1 ಲಕ್ಷ ರೂ. ಹಣ ಕದ್ದಿರುವ ಘಟನೆ ತಾಲ್ಲೂಕಿನ ಕೊಕ್ಕನ ಘಟ್ಟ ಗೇಟ್‌ನಲ್ಲಿ ನಡೆದಿದೆ.

ಲಕ್ಷ್ಮಣ್ ಎಂಬುವವರು ಕುಟುಂಬ ಸಮೇತ ಮದುವೆಗಾಗಿ ಸೋಮವಾರ ಹಾಸನಕ್ಕೆ ಬಂದಿ ದ್ದಾಗ ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಕೊಠಡಿಯಲ್ಲಿನ ಬಟ್ಟೆ, ಕಾಗದ ಪತ್ರಗಳನ್ನು ಚೆಲ್ಲಾಪಿಲ್ಲಿ ಮಾಡಿ ಹಣದೊಂದಿಗೆ ಪರಾರಿಯಾಗಿದ್ದಾರೆ.

## ಮೀರಾಬಾಯಿ ಅವರ ತೂಕ ವಿಭಾಗಕ್ಕೆ ಕೊಕ್: 53 ಕೆ.ಜಿ. ವಿಭಾಗದಲ್ಲಿ ಅವಕಾಶ

• ಪ್ರಜೋದಯ ವರದಿ

**ನವದೆಹಲಿ:** ಭಾರತದ ವೇಟ್‌ಲಿಫ್ಟಿಂಗ್ ತಾರೆ ಮೀರಾಬಾಯಿ ಚಾನು ಅವರ ತೂಕ ವಿಭಾಗವನ್ನು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ತೆಗೆದು ಹಾಕಲಾಗಿದೆ. ಅವರು ಮುಂದಿನ ಕ್ರೀಡೆಗಳಲ್ಲಿ 53 ಕೆ.ಜಿ. ತೂಕ ವಿಭಾಗದಲ್ಲಿ ಸ್ಪರ್ಧಿಸಬೇಕಾಗುತ್ತದೆ.



31ವರ್ಷ ವಯಸ್ಸಿನ ಚಾನು 2020ರ ಟೋಕಿಯೊ ಕ್ರೀಡೆಗಳ 49 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಆದರೆ 2028ರ ಕ್ರೀಡೆಗಳ ವೇಟ್‌ಲಿಫ್ಟಿಂಗ್ ಸ್ಪರ್ಧೆಗಳು 53 ಕೆ.ಜಿ. ತೂಕ ವಿಭಾಗದಿಂದ ಆರಂಭವಾಗಲಿವೆ. ವೇಟ್‌ಲಿಫ್ಟಿಂಗ್‌ನಲ್ಲಿ ಒಟ್ಟು ಸ್ಪರ್ಧೆಗಳ ಸಂಖ್ಯೆಯನ್ನು 12ಕ್ಕೆ ಹೆಚ್ಚಿಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿರ್ಧರಿಸಿದೆ.

53 ಕೆ.ಜಿ. ತೂಕ ವಿಭಾಗದಲ್ಲಿ ಸ್ಪರ್ಧಿಸುವುದರಿಂದ ಚಾನು ಅವರಿಗೆ ಅನುಕೂಲವಾಗಲಿದೆ. ಆದರೆ ಮಣಿಪುರದ ಸ್ಪರ್ಧಿಯು ಮುಂದಿನ ವರ್ಷದ ಏಷ್ಯನ್ ಗೇಮ್ಸ್‌ವರೆಗೆ ಈ ಹಿಂದಿನಂತೆ 49 ಕೆ.ಜಿ. ವಿಭಾಗದಲ್ಲೇ ಸ್ಪರ್ಧಿಸಲಿದ್ದಾರೆಂದು ರಾಷ್ಟ್ರೀಯ ಮುಖ್ಯ ಕೋಚ್ ವಿಜಯ್ ಶರ್ಮಾ ತಿಳಿಸಿದ್ದಾರೆ.

ಪುರುಷರ ವಿಭಾಗ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಲಾ ಆರು ತೂಕ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಈ ವರ್ಷ ಎರಡನೇ ಬಾರಿ ಅಂತರ ರಾಷ್ಟ್ರೀಯ ವೇಟ್ ಲಿಫ್ಟಿಂಗ್‌ಫೆಡರೇಷನ್ ತೂಕ ವಿಭಾಗಗಳಲ್ಲಿ ಬದಲಾವಣೆ ತಂದಿದೆ. ಈ ಹಿಂದಿನ ಪಟ್ಟಿಯ ಪ್ರಕಾರ ಅವರು 48 ಕೆ.ಜಿ. ವಿಭಾಗದಲ್ಲಿ (49 ಕೆ.ಜಿ. ತೆಗೆದುಹಾಕಿದ ಕಾರಣ) ಕಣಕ್ಕಿಳಿ ಯಲು ಯೋಚಿಸಿದ್ದರು.

48 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲು ಆಗುತ್ತಿರುವ ದೈಹಿಕ ಸವಾಲುಗಳ ಬಗ್ಗೆ ಚಾನು ಹಲವು ಬಾರಿ ಮಾತನಾಡಿದ್ದರು. ಏಷ್ಯನ್ ಗೇಮ್ಸ್ ನಂತರ 53 ಕೆ.ಜಿ. ತೂಕ ವಿಭಾಗದಲ್ಲಿ ಸ್ಪರ್ಧಿಸಲು ಬೇಕಾದ ಪ್ರಕ್ರಿಯೆಗಳನ್ನು ಆರಂಭಿಸುತ್ತೇವೆ ಎಂದು ಶರ್ಮಾ ಹೇಳಿದ್ದಾರೆ.

**ಒಲಿಂಪಿಕ್ಸ್‌ನಲ್ಲಿ ಇರಲಿರುವ ತೂಕ ವಿಭಾಗಗಳು**

ಮಹಿಳೆಯರು: 53 ಕೆ.ಜಿ., 61 ಕೆ.ಜಿ, 69 ಕೆ.ಜಿ, 77 ಕೆ.ಜಿ, 86 ಕೆ.ಜಿ. ಮತ್ತು +86 ಕೆ.ಜಿ.

ಪುರುಷರ ವಿಭಾಗ: 65 ಕೆ.ಜಿ., 75 ಕೆ.ಜಿ, 85 ಕೆ.ಜಿ., 95 ಕೆ.ಜಿ, 110 ಕೆ.ಜಿ. ಮತ್ತು +110 ಕೆ.ಜಿ. ವಿಭಾಗ.

2026ರ ಆಗಸ್ಟ್ 1ರಿಂದ ಈ ವಿಭಾಗಗಳಲ್ಲಿ ಸ್ಪರ್ಧೆಗಳು ಆರಂಭವಾಗುತ್ತವೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪುರುಷರು ಮತ್ತು ಮಹಿಳೆಯರ ತಲಾ ಐದು ತೂಕ ವಿಭಾಗಗಳಲ್ಲಿ ಮಾತ್ರ ಸ್ಪರ್ಧೆಗಳು ನಡೆದಿದ್ದವು.

## ಇಲಾಖೆ ವ್ಯಾಪ್ತಿಯ ಅರಿವು ಕೊರತೆ ಅಧಿಕಾರಿಗಳಲ್ಲಿ ಸ್ಪಷ್ಟ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕು ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ (ಕೆಡಿಪಿ) ಸಭೆಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ತಮ್ಮ ಇಲಾಖೆ ವ್ಯಾಪ್ತಿಯ ಅರಿವು ಕೊರತೆಯಿರುವುದು ಸ್ಪಷ್ಟವಾಯಿತು.

ಸಭೆಯ ಆರಂಭದಲ್ಲಿ ತಾಲ್ಲೂಕು ಪಂಚಾಯಿತಿ ನಾಮನಿರ್ದೇಶಕ ಹಾನುಬಾಳ್ ಬಾಸ್ಕರ್ ಮಾತನಾಡಿ, ಬಾಸ್ಕರ್ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ದುಸ್ಥಿತಿಗೀಡಾಗಿದ್ದು, ಅನಾಹುತ ಸಂಭವಿಸುವ ಮುನ್ನ ನೆಲ ಸಮಗೊಳಿಸಬೇಕೆಂದು ಹೇಳಿದರು. ಅದಕ್ಕೆ ಶಾಸಕ ಸಿಮೆಂಟ್ ಮಂಜು ಅವರು ಜಿಲ್ಲಾ ಪಂಚಾಯಿತಿ ಎಇಇ ಲಖಾನ್ ಸಿಫಾನಿಗೆ ಸೂಚಿಸಿದರೂ, ಲೋಕೋಪಯೋಗಿ ಇಲಾಖೆಯ ಎಇಇ ಮುರುಗೇಶ್ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದರು. ಶಾಸಕರು ಅಸಮಾಧಾನ ವ್ಯಕ್ತಪಡಿಸಿ ತಮ್ಮ ಇಲಾಖೆಯ ವ್ಯಾಪ್ತಿ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.





ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಅಧಿಕಾರಿ ಗಂಗಾಧರ್ ಸ್ಪಷ್ಟನೆ ನೀಡುತ್ತಾ ಶಾಲಾ ಕಟ್ಟಡ ನೆಲ ಸಮಗೊಳಿಸುವುದು ಶಾಲಾ ಮಂಡಳಿ ವ್ಯಾಪ್ತಿಗೆ ಒಳಪಟ್ಟಿದ್ದು, ಜಿಲ್ಲಾ ಪಂಚಾಯಿತಿ ಇಂಜಿನೀಯರ್ ವರದಿ ಆಧಾರವಾಗಿ ಕ್ರಮ ಕೈಗೊಳ್ಳಬಹುದು ಎಂದರು.

ನಂತರ ನರೇಗಾ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿ ಎಇಇ ಮುಂಗಡ ಪಾವತಿಯನ್ನು ಕೇಳಿದಾಗ, ತಾಲ್ಲೂಕು ಪಂಚಾಯಿತಿ ಇಒ ಗಂಗಾಧರ್ ನರೇಗಾ ಕೆಲಸಕ್ಕೆ ಮುಂಗಡ ಅನಾವಶ್ಯಕ ಎಂದು ಸ್ಪಷ್ಟನೆ ನೀಡಿದರು. ಶಾಸಕರು ಅಸಮಾಧಾನ ವ್ಯಕ್ತಪಡಿಸಿ, ಮೊದಲು ತಮ್ಮ ಇಲಾಖೆ ನಿಯಮಗಳನ್ನು ತಿಳಿದುಕೊಳ್ಳಿ, ಇಲ್ಲದಿದ್ದರೆ ಅಭಿವೃದ್ಧಿ ವಿಳಂಬವಾಗುತ್ತದೆ ಎಂದರು.

ಕ್ರಾಫರ್ಡ್ ಆಸ್ಪತ್ರೆಯ ಸ್ಕ್ಯಾನಿಂಗ್ ಯಂತ್ರ ದುರಸ್ಥಿತಿಯ ವಿಚಾರ ಪ್ರಸ್ತಾಪವಾದಾಗ ಶಾಸಕರು 10 ವರ್ಷಗಳಲ್ಲಿ 10 ಸ್ಕ್ಯಾನಿಂಗ್ ಕೂಡ ಮಾಡಿಲ್ಲ, ಈಗ ಯಂತ್ರ ಹಾನಿಯಾಗಿದೆ ಎಂದರೆ ಖಾಸಗಿ ಲ್ಯಾಬ್ ಲಾಭಕ್ಕಾಗಿ ನಡವಳಿಕೆಯೇ ಎಂದು ಪ್ರಶ್ನಿಸಿದರು. ವೈದ್ಯಾಧಿಕಾರಿ ಡಾ॥ಅರುಣ್ ಕುಮಾರ್ ವಿದ್ಯುತ್ ಏರಿಳಿತದಿಂದ ಯಂತ್ರ ಹಾನಿಯಾಗಿದೆ ಎಂದರು.

ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಮುರುಳಿ ಮೋಹನ್ ಖಾಸಗಿ ಅಂಬುಲೆನ್ಸ್‌ಗಳ ಅತಿಯಾದ ಹಾವಳಿ ಕುರಿತು ಆಕ್ರೋಶ ವ್ಯಕ್ತಪಡಿಸಿ, ಅಂಬುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಿ ಆಸ್ಪತ್ರೆ ಎದುರು ನಿಲುಗಡೆ ನಿಷೇಧಿಸಲು ಸೂಚಿಸಿದರು. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ವೈ.ಪಿ. ರಾಜೇಗೌಡ ಅಪಘಾತಗಳು ಕೆಲವರಿಗೆ ವ್ಯಾಪಾರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಲಾ ಜಮೀನು ಸಂರಕ್ಷಣೆಯ ಕುರಿತು ಶಿಕ್ಷಣ ಇಲಾಖೆ ವರದಿ ಪ್ರಕಾರ, 168 ಸರ್ಕಾರಿ ಶಾಲೆಗಳಲ್ಲಿ 39ಕ್ಕೆ ದಾಖಲೆ ಸಂರಕ್ಷಣೆ ಮಾಡಲಾಗಿದೆ. ಶಾಸಕರು ತಹಶೀಲ್ದಾರ್ ಸುಪ್ರೀತಾ ಅವರಿಗೆ ಸೂಚನೆ ನೀಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಚರ್ಚಿಸಿ ಎಲ್ಲಾ ಶಾಲೆಗಳ ಹೆಸರಿಗೆ ಪಹಣಿ ನೊಂದಾಯಿಸಬೇಕೆಂದರು. ಮುರುಳಿ ಮೋಹನ್ ಒಮ್ಮೆ ಸರ್ಕಾರಿ ಹಣ ಖಾಸಗಿ ಜಮೀನಿನಲ್ಲಿ ಬಳಸಿದರೆ ಅದು ಸರ್ಕಾರದ ಸ್ವತ್ತು ಎಂದು ನೆನಪಿಸಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಅಭಿವೃದ್ಧಿ ಕಾಮಗಾರಿಗಳಿಗೆ ಅಡ್ಡಿಪಡಿಸುತ್ತಿದ್ದಾರೆಂಬ ದೂರಿನ ನಡುವೆ ಶಾಸಕರು ಅಭಿವೃದ್ಧಿ ಕಾಮಗಾರಿಗಳು ಜನರ ಹಿತಕ್ಕಾಗಿ, ಅಡ್ಡಿಪಡಿಸಬಾರದು ಎಂದು ಎಚ್ಚರಿಸಿದರು. ಅಂತ್ಯದಲ್ಲಿ ಅನುಷ್ಠಾನ ಸಮಿತಿ ಅಧ್ಯಕ್ಷರು ಹಾಗೂ ಶಾಸಕರ ನಡುವೆ ಕೆಲ ವಿಷಯಗಳಲ್ಲಿ ಅಭಿಪ್ರಾಯ ಭಿನ್ನತೆ ಗೋಚರಿಸಿದರೂ, ಅಭಿವೃದ್ಧಿ ಕಾರ್ಯಗಳಲ್ಲಿ ಶೀಘ್ರ ಕ್ರಮ ಕೈಗೊಳ್ಳಲು ಇಬ್ಬರೂ ಅಧಿಕಾರಿಗಳಿಗೆ ಸೂಚಿಸಿದರು.

ಹೆತ್ತೂರು ಭಾಗದ ಕಾಂಕ್ರಿಟ್ ರಸ್ತೆಗಳು ಕುಸಿಯುತ್ತಿರುವ ಬಗ್ಗೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ರಾಜೇಗೌಡ ಆಕ್ರೋಶ ವ್ಯಕ್ತಪಡಿಸಿದರೆ, ಶಾಸಕರು ತಕ್ಷಣ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟವರಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಸಫೀರ್ ಅಹಮ್ಮದ್, ತಹಶೀಲ್ದಾರ್ ಸುಪ್ರೀತಾ, ತಾಲ್ಲೂಕು ಪಂಚಾಯಿತಿ ಇಒ ಗಂಗಾಧರ್ ಉಪಸ್ಥಿತರಿದ್ದರು.

## ಕಬ್ಬು ಬೆಳೆಗಾರರ ನೆರವಿಗೆ ಬಾರದ ಸರ್ಕಾರ: ವಿಜಯೇಂದ್ರ

• ಪ್ರಜೋದಯ ವರದಿ

**ಬೆಳಗಾವಿ:** ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದರೂ ರಾಜ್ಯ ಸರ್ಕಾರ ರೈತರ ಸಂಕಷ್ಟ ಆಲಿಸಲು ಮುಂದೆ ಬರುತ್ತಿಲ್ಲವೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಆರೋಪಿ ಸಿದರು.



ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿ ಟನ್ ಕಬ್ಬಿಗೆ 3,500 ರೂ. ನೀಡುವಂತೆ ಗುರ್ಲಾಪುರ ಬಳಿ ಕಬ್ಬು ಬೆಳೆಗಾರರು ಹೋರಾಟ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರವೇ ಮುಂದಾಳತ್ವ ವಹಿಸಿ ಅವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಬೇಕಿತ್ತು. ರಾಜ್ಯ ಸರ್ಕಾರ ಸ್ಪಂದಿಸದ ಹಿನ್ನಲೆಯಲ್ಲಿ ಅವರ ಹೋರಾಟಕ್ಕೆ ಬೆಂಬಲ ಸೂಚಿಸಲು ಇಲ್ಲಿಗೆ ಬಂದಿದ್ದೇವೆಂದರು.

ರಾಜ್ಯದಲ್ಲಿ 2014ರಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆದ ವೇಳೆ ಕಬ್ಬಿನ ವಿಚಾರವಾಗಿಯೇ ರೈತ ವಿಠ್ಠಲ ಅರಭಾವಿ ಪ್ರಾಣ ಕಳೆದುಕೊಂಡರು. ಆಗ ಬಿ.ಎಸ್.ಯಡಿಯೂರಪ್ಪ ಹೋರಾಟ ಮಾಡಿ ಅಂದಿನ ಮುಖ್ಯಮಂತ್ರಿ ಮೇಲೆ ಒತ್ತಡ ತಂದು ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಇಂದು ರೈತರು ಸಂಕಷ್ಟ ಎದುರಿಸುತ್ತಿದ್ದರೂ ಸರ್ಕಾರ ಕಿಂಚಿತ್ತು ಕಾಳಜಿ ತೋರುತ್ತಿಲ್ಲವೆಂದು ದೂರಿದರು.

ಧಾರಾಕಾರ ಮಳೆಯಿಂದ ರೈತರು ತೊಂದರೆಗೀಡಾದಾಗ ಸಹ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು, ಕಂದಾಯ ಸಚಿವರು ಮತ್ತು ಕೃಷಿ ಸಚಿವರು ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡಲಿಲ್ಲ. ಸರ್ಕಾರಕ್ಕೆ ರೈತರ ಪರ ಕಾಳಜಿ ಇಲ್ಲ. ಹಾಗಾಗಿ ಇಂದು ಕಬ್ಬಿನ ದರಕ್ಕಾಗಿ ರೈತರು ಮತ್ತೆ ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ಬಂದಿದೆಯೆಂದು ಆರೋಪಿ ಸಿದರು.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ವಾರ್ಷಿಕ 6 ಮಿಲಿಯನ್ ಟನ್ ಕಬ್ಬು ನುರಿಸುತ್ತವೆ. ಅದರಿಂದ ರಾಜ್ಯ ಸರ್ಕಾರಕ್ಕೆ 55 ಸಾವಿರ ಕೋಟಿ ರೂ. ತೆರಿಗೆ ಬರುತ್ತದೆ. ಆದರೆ ಸರ್ಕಾರ ಕಬ್ಬು ಬೆಳೆಗಾರರ ನೆರವಿಗೆ ನಿಲ್ಲದ್ದರಿಂದ ಯಡಿಯೂರಪ್ಪ ಮಗನಾಗಿ ಮತ್ತು ರೈತ ನಾಯಕನಾಗಿ ಇಲ್ಲಿಗೆ ಬಂದಿದ್ದೇನೆಂದರು.

ರಾಜ್ಯದಲ್ಲಿ ಯಾರ ಸಕ್ಕರೆ ಕಾರ್ಖಾನೆಗಳಿವೆ ಎಂಬುದು ನಿಮಗೆ ಗೊತ್ತಿದೆ. ಸಕ್ಕರೆ ಕಾರ್ಖಾನೆ ಗಳ ಸಾಹುಕಾರಗಳ ಜೊತೆಗೆ ಸರ್ಕಾರ ಮಾತನಾಡಬೇಕು. ಅಧಿಕಾರಿಗಳು ಸಹ ಚರ್ಚಿಸಿ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯುವ ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಹೊಸ ಮುಖ್ಯಮಂತ್ರಿ ಬರುತ್ತಾರೆಂಬ ರಾಮುಲು ಹೇಳಿಕೆಗೆ ಪ್ರತಿಕ್ರಿಯಿಸಿ, ರಾಮುಲು ಹೇಳಿದ್ದನ್ನು ಪಕ್ಕಕ್ಕೆ ಇಡಿ. ಸ್ವತಃ ಆಡಳಿತ ಪಕ್ಷದ ಸಚಿವರು, ಶಾಸಕರೇ ಅದನ್ನು ಹೇಳುತ್ತಿದ್ದಾರೆ. ಸರ್ಕಾರದಲ್ಲಿ ಮುಖ್ಯಮಂತ್ರಿ ಕುರ್ಚಿಗೆ ಯಾವ ರೀತಿ ಯುದ್ದ ಆರಂಭವಾಗಿದೆ ಎಂಬುದು ಬಿಹಾರ ಚುನಾವಣೆ ಫಲಿತಾಂಶದ ನಂತರ ಎಲ್ಲರಿಗೂ ಗೊತ್ತಾಗುತ್ತದೆಂದರು.

## ಮನೆ ಕಳ್ಳತನ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ವಡೂರು ಗ್ರಾಮದಲ್ಲಿ ಭಿಕ್ಷೆ ಬೇಡುವ ನೆಪದಲ್ಲಿ ಮನೆಗೆ ನುಗ್ಗಿ ಕಳ್ಳತನ ಮಾಡಿದ ಘಟನೆ ಶನಿವಾರ ಬೆಳಿಗ್ಗೆ ನಡೆದಿದೆ.

ಮಾಲೆ ಧರಿಸಿ ಭಿಕ್ಷೆ ಬೇಡುವಂತೆ ನಟಿಸಿದ ಇಬ್ಬರು ಅಪರಾಧಿಗಳು ಬೆಳಿಗ್ಗೆ ಸುಮಾರು 10 ಗಂಟೆಯ ವೇಳೆ ಬೈಕ್‌ನಲ್ಲಿ ಗ್ರಾಮಕ್ಕೆ ಬಂದು ಮನೆ ಮನೆಗೆ ತೆರಳಿ ಭಿಕ್ಷೆ ಕೇಳುತ್ತಿದ್ದರು. ಈ ವೇಳೆ ಗ್ರಾಮದ ರಂಜನ್ ಎಂಬುವವರ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ ಅವರು ಮನೆಗೆ ನುಗ್ಗಿ ಬೀರುವಿನ ಲಾಕರ್ ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದಾರೆ.

ಈ ಕುರಿತು ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಕಳ್ಳರ ಪತ್ತೆಗೆ ತನಿಖೆ ಆರಂಭಿಸಿದ್ದಾರೆ.

## ದೇವಾಲಯದಲ್ಲಿ ಕಳ್ಳತನ

**ಚನ್ನರಾಯಪಟ್ಟಣ:** ದೇವಾಲಯ ಬಾಗಿಲು ಮುರಿದು ದೇವರಿಗೆ ಹಾಕಿದ್ದ ಆಭರಣ ಹಾಗು ಹುಂಡಿ ಹಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶೆಟ್ಟಿಹಳ್ಳಮ್ಮ ದೇಗುಲದಲ್ಲಿ ನ.2ರ ರಾತ್ರಿ ಘಟನೆ ನಡೆದಿದೆ. ದೇವಾಲಯದ ಬಾಗಿಲಿಗೆ ಹಾಕಿದ್ದ ಬೀಗ ಹಾಗು ಒಳಗೆ ಇದ್ದ ಹುಂಡಿಯನ್ನು ಒಡೆದು ಅಂದಾಜು 6 ಸಾವಿರ ರೂ. ಕಾಣಿಕೆ ಹಣ ಕದ್ದಿದ್ದಾರೆ. ಜೊತೆಗೆ 6 ಗ್ರಾಂ ತೂಕದ 4 ಚಿನ್ನದ ತಾಳಿ ಗುಂಡು, 1 ತಾಳಿ ಹಾಗು 2 ಬೆಳ್ಳಿ ಛತ್ರಿ ಕದಿಯಲಾಗಿದೆ. ಕಳುವಾಗಿರುವ ಒಟ್ಟು ಸಾಮಾಗ್ರಿಗಳ ಮೌಲ್ಯ 52 ಸಾವಿರ ರೂ. ಆಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗರ್ಭ ಧರಿಸಿದ್ದ ಹಸುವಿಗೆ ಯಶಸ್ವಿ ಶಸ್ತ್ರ ಚಿಕಿತ್ಸೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಏಳು ತಿಂಗಳು ಗರ್ಭ ಧರಿಸಿದ ಹಸುವಿಗೆ ಕರುಳು ಜೋಡಿಸುವ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸ ಲಾಯಿತು.

ಕೋಡಿಹಳ್ಳಿ ಗ್ರಾಮದ ಶೈಲಾ ಅವರ ಹಸು ಒಂದು ವಾರದಿಂದ ಸಗಣಿ ಹಾಕದೆ ನರಳುತ್ತಿತ್ತು. ವಿಷಯ ತಿಳಿದು ಸ್ಥಳಕ್ಕೆ ಬಂದ ಪಶುವೈದ್ಯ ಡಾ॥ ಎಸ್.ಪಿ.ಮಂಜುನಾಥ್, ಕರುಳಿನ ಮೇಲೆ ಕರುಳು ಹತ್ತುವ 'ಇಂಟಸ್ಸ ಸೆಪ್ಷನ್' ಎಂಬ ಸ್ಥಿತಿಯೆಂದು ಪತ್ತೆ ಹಚ್ಚಿ ಹಸುವು ನಿಂತಿರು ವಂತೆಯೇ ಬಲಭಾಗದ ಉದರ ತೆರೆಯುವ ಶಸ್ತ್ರ ಚಿಕಿತ್ಸೆ ನಡೆಸಿ ಕೊಳೆತ ಕರುಳನ್ನು ಕತ್ತರಿಸಿ ತೆಗೆದು ಕರುಳಿನ ಜೋಡಣೆ ನಡೆಸಿದರು. ಮಾರನೇ ದಿನವೇ ಹಸು ಸಗಣಿ ಹಾಕಿ ಸಹಜ ಜೀವನ ದತ್ತ ಮರಳಿದೆ.

ಡಾ॥ ಎಸ್.ಪಿ.ಮಂಜುನಾಥ್ ಅವರು ಮಾತನಾಡಿ, ಕ್ಲಿಷ್ಟಕರ ಶಸ್ತ್ರಚಿಕಿತ್ಸೆಯನ್ನು ರೈತರ ಮನೆ ಬಾಗಿಲಿನಲ್ಲಿಯೇ ನಡೆಸಿ ಜಾನುವಾರುಗಳ ಜೀವ ಉಳಿಸಬಹುದಾಗಿದೆ ಎಂದರು.

## ಜಾಗತಿಕ ಆರ್ಥಿಕತೆಗೆ ತಕ್ಕಂತೆ ಕೌಶಲ ಪರಿವರ್ತನೆ

• ಪ್ರಜೋದಯ ವರದಿ

**ಬೆಂಗಳೂರು:** ನೂತನ ಕೌಶಲ ವಿಶ್ವವಿದ್ಯಾಲಯವನ್ನು ಸಂಡೂರಿನಲ್ಲಿ ಸ್ಥಾಪಿಸಲಾಗುವುದು. ಜಾಗತಿಕ ಆರ್ಥಿಕತೆಗೆ ತಕ್ಕಂತೆ ಕೌಶಲ ಪರಿವರ್ತನೆಗೆ ಕ್ರಮ ಕೈಗೊಳ್ಳಲಾಗುವುದೆಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ನಗರದಲ್ಲಿ ಮಂಗಳವಾರ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗು ಜೀವನೋಪಾಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಬೆಂಗಳೂರು ಕೌಶಲ ಶೃಂಗಸಭೆ ಉದ್ಘಾಟಿಸಿ ಮಾತನಾಡಿ, ಕರ್ನಾ ಟಕ ವಿಶಿಷ್ಟ ಜನಸಂಖ್ಯೆಯ ಹೊರಳು ಹಾದಿಯ ಲ್ಲಿದೆ. ನಮ್ಮ ಜನಸಂಖ್ಯೆಯ ಶೇ. 60 ಕ್ಕಿಂತ ಹೆಚ್ಚು ಜನರು 35 ವಯೋಮಾನದೊಳಗಿದ್ದಾರೆ. ಮುಂದಿನ ದಶಕದಲ್ಲಿ ಸುಮಾರು 1.2 ಕೋಟಿ ಯುವಕರು ಕಾರ್ಯಪಡೆ ಪ್ರವೇಶಿಸುತ್ತಾರೆ. ಈ ಯುವ ಪೀಳಿಗೆಯನ್ನು ಸರಿಯಾದ ಕೌಶಲ, ಮನಸ್ಥಿತಿ ಮತ್ತು ಆತ್ಮವಿಶ್ವಾಸದಿಂದ ಸಜ್ಜುಗೊಳಿಸಿದರೆ ಇದು ಅಸಾಧಾರಣ ಅವಕಾಶ. ಉದ್ಯಾನ ನಗರಿ ಎನ್ನುವ ಹೆಗ್ಗಳಿಕೆಯಿಂದ ಸ್ಟಾರ್ಟ್‌ಅಪ್ ರಾಜಧಾನಿಯಾಗಿ ರೂಪಾಂತರಗೊಂಡಿರುವ ಬೆಂಗಳೂರು ನಗರ ಈಗ ಭಾರತದ ಕೌಶಲ ರಾಜಧಾನಿಯಾಗಿರುವುದು ಹೆಮ್ಮೆಯ ವಿಷಯವೆಂದರು.

**ಕರ್ನಾಟಕ ಕೌಶಲಾಭಿವೃದ್ಧಿ ನೀತಿ**

ಕಳೆದ ವರ್ಷದ ಆಯವ್ಯಯದಲ್ಲಿ ಘೋಷಿಸಲಾಗಿದ್ದ ಕರ್ನಾಟಕ ಕೌಶಲಾಭಿವೃದ್ಧಿ ನೀತಿ 2025-32 ಅನ್ನು ಇಂದು ಬೆಂಗಳೂರು ಸ್ಕಿಲ್ ಸಮಿಟ್-2025 ಕಾರ್ಯಕ್ರಮದ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತಿದೆ. ಈ 7 ವರ್ಷದ ಕಾರ್ಯತಂತ್ರದ ನೀಲನಕ್ಷೆಗೆ 4,432 ಕೋಟಿ ರೂ. ಅನುದಾನದ ಬೆಂಬಲ ನೀಡಲಾಗಿದ್ದು, ಕರ್ನಾಟಕವನ್ನು ಕೌಶಲ ಭರಿತ ಹಾಗು ಭವಿಷ್ಯದ ಸವಾಲುಗಳಿಗೆ ಸನ್ನದ್ಧರಾಗಿಸುವುದು ಹಾಗು ಕಾರ್ಮಿಕ ಶಕ್ತಿಯ ಜಾಗತಿಕ ಕೇಂದ್ರವನ್ನಾಗಿ ರೂಪಿಸುವುದು ನಮ್ಮ ಉದ್ದೇಶ. 2032ಕ್ಕೆ ಸುಮಾರು 30 ಲಕ್ಷ ಯುವಕರಿಗೆ ಕೌಶಲ ತರಬೇತಿ, ಐಟಿಐಗಳಲ್ಲಿ ಮಹಿಳೆಯರ ಪ್ರವೇಶ ವನ್ನು ಶೇ. 33ಕ್ಕೆ ಹೆಚ್ಚಳ ಹಾಗು ಐಎಂಸಿಕೆ ಮೂಲಕ ಜಾಗತಿಕ ಉದ್ಯೋಗಾವಕಾಶಗಳ ವೃದ್ಧಿಯನ್ನು ಸಾಧಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು.





**ಜಾಗತಿಕ ಮಟ್ಟಕ್ಕೆ ಕಾರ್ಮಿಕ ಶಕ್ತಿ**

ಜಾಗತಿಕ ಮಟ್ಟಕ್ಕೆ ಕಾರ್ಮಿಕ ಶಕ್ತಿಯನ್ನು ಸಿದ್ದಪಡಿಸಲು ಕರ್ನಾಟಕ ಸ್ಕಿಲ್ ಒಲಿಂಪಿಕ್ಸ್ ಎಂಬ ಯೋಜನೆ ಹಮ್ಮಿಕೊಳ್ಳಲಾಗಿದೆ. ಕೌಶಲ ಸ್ಪರ್ಧೆಯಲ್ಲಿ 48 ಪದಕಗಳನ್ನು ಪಡೆದು ಭಾರತದಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದಿದೆ. 4 ಅಂತರ ರಾಷ್ಟ್ರೀಯ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಐಟಿಐಗಳು ಹಾಗು ಜಿಟಿಟಿಸಿಗಳ ಮೂಲಕ ಸುಮಾರು 33,212 ಯುವಕರಿಗೆ ತರಬೇತಿ ನೀಡ ಲಾಗಿದೆ. ಶಾಲಾ ಮಕ್ಕಳಿಗೆ ನನ್ನ ವೃತ್ತಿ, ನನ್ನ ಆಯ್ಕೆ ಕಾರ್ಯಕ್ರಮದಡಿ, 35000 ಮಕ್ಕಳಿಗೆ ತರ ಬೇತಿ ನೀಡಲಾಗಿದೆ. ಈ ವರ್ಷ ಯೋಜನೆಯನ್ನು 500 ಶಾಲೆಗಳಿಗೆ ವಿಸ್ತರಿಸಿ 2.3 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಗುರಿಯಿದೆ ಎಂದರು.

ಬೆಂಗಳೂರು ಕೌಶಲ ಶೃಂಗಸಭೆ ಕರ್ನಾಟಕದ ಕೌಶಲ ಪಯಣದಲ್ಲಿ ಒಂದು ಮೈಲಿಗಲ್ಲು. ಕರ್ನಾಟಕವನ್ನು ವಿಶ್ವದಲ್ಲೇ ಕೌಶಲಗಳಿಗೆ ಹೆಸರಾದ ರಾಜ್ಯವನ್ನಾಗಿಸುವುದು ನಮ್ಮ ಗುರಿ. ಇಎಸ್ ಡಿಎಂಎಐ/ಎಂಎಲ್ ಏರೋಸ್ಪೇಸ್, ಹಸಿರು ಇಂಧನ, ಒಳಗೊಳ್ಳುವಿಕೆ ಹಾಗು ಅಂತರ ರಾಷ್ಟ್ರೀಯ ಮಟ್ಟ ದಲ್ಲಿ ಉದ್ಯೋಗಕ್ಕೆ ತಯಾರಾಗಿರುವ ಕಾರ್ಮಿಕ ಪಡೆಯನ್ನು ಸಿದ್ದಮಾಡುವತ್ತಾ ಗಮನ ಕೇಂದ್ರೀಕೃತಗೊಳಿಸಿದೆ ಎಂದರು.

2032ರ ಹೊತ್ತಿಗೆ ಕರ್ನಾಟಕವನ್ನು ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಜ್ಯವನ್ನಾ ಗಿಸುವುದು ನಮ್ಮ ಗುರಿ. ಈ ಗುರಿಯನ್ನು ಸಾಧಿ ಸಲು ನಮಗಿರುವ ಪ್ರಬಲ ಅಸ್ತ್ರವೆಂದರೆ ನಮ್ಮ ಜನ-ಕೌಶಲಭರಿತ, ಭವಿಷ್ಯಕ್ಕೆ ತಯಾರಾದ ಹಾಗು ನಾವೀನ್ಯತೆವುಳ್ಳ ಕಾರ್ಮಿಕ ಶಕ್ತಿ ಎಂದರು.

### ಕೌಶಲ್ಯಾಭಿವೃದ್ಧಿಯಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿರುವ ರಾಜ್ಯ

ಕೌಶಲ್ಯಾಭಿವೃದ್ಧಿಯಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿರುವ ರಾಜ್ಯವಾಗಿದ್ದು, ದೇಶ ದಲ್ಲಿ ಪ್ರತ್ಯೇಕವಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಯನ್ನು ಪ್ರಾರಂಭಿಸಿದ ರಾಜ್ಯಗಳಲ್ಲಿ ಒಂದಾಗಿದೆ. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮೂಲಕ ಕೌಶಲ್ಯವನ್ನು ರಾಜ್ಯದ ಮೂಲೆ ಮೂಲೆಗೂ ಕೊಂಡೊಯ್ದಿದ್ದೇವೆ. 5 ಲಕ್ಷ ಯುವ ಜನರನ್ನು ತಲುಪುವ ಗುರಿ ಹೊಂದಿದ್ದರೂ ನಾವು ಅದಕ್ಕೂ ಹೆಚ್ಚು ಜನರನ್ನು ತಲುಪಿದ್ದೇವೆ. ಯುವ ಯುಗ ಯೋಜನೆಯಡಿ ಸುಧಾರಿತ ಡಿಜಿಟಲ್ ಕೌಶಲವನ್ನು 1.10 ಲಕ್ಷ ಜನರಿಗೆ ಒದಗಿಸುವ ಮೂಲಕ ಕರ್ನಾಟಕ ಕೈಗಾರಿಕಾ ಕ್ರಾಂತಿಯನ್ನು 4 ನೇ ಸ್ಥಾನದಲ್ಲಿದೆ ಯೆಂದು ಮುಖ್ಯಮಂತ್ರಿ ವಿವರಿಸಿದರು.

ಕಳೆದ ಎರಡು ವರ್ಷಗಳಲ್ಲಿ ರಾಜ್ಯಾದ್ಯಂತ 34 ಮೆಗಾ ಉದ್ಯೋಗ ಮೇಳಗಳನ್ನು ಹಮ್ಮಿ ಕೊಂಡಿದ್ದು 1.43 ಲಕ್ಷ ಉದ್ಯೋಕಾಂಕ್ಷಿಗಳು ಭಾಗವಹಿಸಿದ್ದಾರೆ. 27, 123 ಜನರಿಗೆ ಉದ್ಯೋಗಾವಕಾಶಗಳು ಲಭಿಸಿವೆ. ಬದಲಾಗುತ್ತಿರುವ ಜಾಗತಿಕ ಆರ್ಥಿಕತೆಗೆ ತಕ್ಕಂತೆ ರಾಜ್ಯದ ಕೌಶಲ್ಯ ದೃಷ್ಟಿಯನ್ನು ಪರಿವರ್ತಿಸಲಾಗಿದೆ ಎಂದು ಅವರು ತಿಳಿಸಿದರು.

**ಕೌಶಲ್ಯಾಭಿವೃದ್ಧಿಯಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿರುವ ರಾಜ್ಯ**

ಕೌಶಲ್ಯಾಭಿವೃದ್ಧಿಯಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿರುವ ರಾಜ್ಯವಾಗಿದ್ದು, ದೇಶ ದಲ್ಲಿ ಪ್ರತ್ಯೇಕವಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಯನ್ನು ಪ್ರಾರಂಭಿಸಿದ ರಾಜ್ಯಗಳಲ್ಲಿ ಒಂದಾಗಿದೆ. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮೂಲಕ ಕೌಶಲ್ಯವನ್ನು ರಾಜ್ಯದ ಮೂಲೆ ಮೂಲೆಗೂ ಕೊಂಡೊಯ್ದಿದ್ದೇವೆ. 5 ಲಕ್ಷ ಯುವ ಜನರನ್ನು ತಲುಪುವ ಗುರಿ ಹೊಂದಿದ್ದರೂ ನಾವು ಅದಕ್ಕೂ ಹೆಚ್ಚು ಜನರನ್ನು ತಲುಪಿದ್ದೇವೆ. ಯುವ ಯುಗ ಯೋಜನೆಯಡಿ ಸುಧಾರಿತ ಡಿಜಿಟಲ್ ಕೌಶಲವನ್ನು 1.10 ಲಕ್ಷ ಜನರಿಗೆ ಒದಗಿಸುವ ಮೂಲಕ ಕರ್ನಾಟಕ ಕೈಗಾರಿಕಾ ಕ್ರಾಂತಿಯನ್ನು 4 ನೇ ಸ್ಥಾನದಲ್ಲಿದೆ ಯೆಂದು ಮುಖ್ಯಮಂತ್ರಿ ವಿವರಿಸಿದರು.

## ಅಮಾಯಕನಿಗೆ ಕಳ್ಳನ ಪಟ್ಟ

» ಮೊದಲನೇ ಪುಟದಿಂದ

ಬೈಕ್‌ನಲ್ಲಿ ಬಂದ ಅಮಾಯಕ ಸುಖಾ ಸುಮ್ಮನೆ ಕಳ್ಳನೆಂಬ ಸಂಕಷ್ಟಕ್ಕೆ ಸಿಲುಕಬೇಕಾಯಿತು.

ಮಕ್ಕಳಿಗೆ ಸೇರಬೇಕಾದ ಆಹಾರ ಪದಾರ್ಥವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದಾನೆಂದು ಭಾವಿಸಿ ಆತನನ್ನು ಹಿಡಿದು ಮೊಬೈಲ್ ಕ್ಯಾಮರಾದಲ್ಲಿ ಆತನ ಮುಖ ಸೆರೆ ಹಿಡಿದು ಕಳ್ಳನ ಪಟ್ಟ ಕಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಡಿಪಿಒ ಸುರೇಶ್ ಅವರು, ಪರಿಶೀಲನೆ ನಡೆಸಿದಾಗ ಪೂಜಾರ ಕೊಪ್ಪಲು ಅಂಗನವಾಡಿ ಶಿಕ್ಷಕಿ ತಮಗೆ 7 ಕೆ.ಜಿ. ಪುಡಿ ಆಹಾರ ಪದಾರ್ಥ ಬೇಕೆಂದು ಹಾಗು ಅಷ್ಟೇ ಪ್ರಮಾಣದ ಪದಾರ್ಥ ಕೊಟ್ಟಿರುವ ದಾಖಲಾತಿ ತಾಳೆಯಾಗಿದೆ. ಆತ ಅಂಗನವಾಡಿಗೆ ಹೋಗುತ್ತಿರುವುದು ದೃಢಪಟ್ಟ ಬಳಿಕ ಸಮಸ್ಯೆ ಸುಖಾಂತ್ಯ ಕಂಡಿದೆ.

ಆಹಾರ ಪದಾರ್ಥ ಕಳ್ಳತನವಾಗಿರುವ ಕುರಿತು ಸುದ್ದಿ ಹರಿದಾಡಿದ್ದರಿಂದ ಮಹಿಳಾ ಮತ್ತು ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಧರಣಿಕುಮಾರ್ ಅವರು ಸಮಗ್ರ ಪರಿಶೀಲನೆ ನಡೆಸುವಂತೆ ಅಧಿಕಾರಿಗೆ ಸೂಚಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK